ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೨೩

# ಪಟ್ಟಿ – ೦೮

# ಕರ್ನಾಟಕ ವಿಧಾನ ಪರಿಷತ್ತು

ನೂರ ಮೂವತ್ತೆರಡನೆಯ ಅಧಿವೇಶನ

ಬುಧವಾರ, ದಿನಾಂಕ: ೩೦ನೇ ನವೆಂಬರ್, ೨೦೧೬

---

## ಸಮೂಹ – III

೧. ಅರಣ್ಯ ಸಚಿವರು.

೨. ಕಂದಾಯ ಸಚಿವರು.

೩. ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು.

೪. ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು.

೫. ಕಾರ್ಮಿಕ ಸಚಿವರು.

೬. ಜವಳಿ ಹಾಗೂ ಮುಜರಾಯಿ ರಾಜ್ಯ ಸಚಿವರು.

೭. ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು.

---

# ಕಲಬುರಗಿ ಜಿಲ್ಲೆಯಲ್ಲಿ ಸಿಮೆಂಟ್ ಕಾರ್ಖಾನೆಗಳನ್ನು ಸ್ಥಾಪಿಸುವ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):–**

೭೬೮ (೧೦೧೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಐದು ವರ್ಷಗಳಿಂದೀಚೆಗೆ ಕಲಬುರಗಿ ಜಿಲ್ಲೆಯಲ್ಲಿ ಸ್ಥಾಪನೆಗೊಂಡಿರುವ ಸಿಮೆಂಟ್ ಕಾರ್ಖಾನೆಗಳು ಎಷ್ಟು ; (ಕಾರ್ಖಾನೆವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಸದರಿ ಸಿಮೆಂಟ್ ಕಾರ್ಖಾನೆಗಳು ಸಿಮೆಂಟ್ ಉತ್ಪಾದನೆಗೆ ಬೇಕಾಗುವಂತಹ ಕಚ್ಚಾ ಸಾಮಗ್ರಿಗಾಗಿ ಗಣಿಗಾರಿಕೆ ಹೊಂದಿವೆಯೇ ; ಇದ್ದಲ್ಲಿ, ಸಿಮೆಂಟ್ ಕಾರ್ಖಾನೆವಾರು, ಹೊಂದಿದ ಗಣಿ ಭೂಮಿ ವಿಸ್ತೀರ್ಣವಾರು ಮಾಹಿತಿ ನೀಡುವುದು ;

(ಇ) ಸದರಿ ಸಿಮೆಂಟ್ ಕಾರ್ಖಾನೆಗಳು ತಮ್ಮ ಗಣಿಗಾರಿಕೆಗಾಗಿ ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಪರಿವರ್ತಿಸದೆ ಗಣಿಗಾರಿಕೆ ಮಾಡಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದ್ದಲ್ಲಿ, ಕಾರ್ಖಾನೆವಾರು ಮಾಹಿತಿ ನೀಡುವುದು ;

(ಈ) ಸದರಿ ಕಾರ್ಖಾನೆಯವರಿಗೆ ಕಾಂಪೌಂಡ್ ಫೀ ವಸೂಲಿ ಮಾಡಲು ಸರ್ಕಾರ ಕ್ರಮ ವಹಿಸಿರುವುದೇ ; ಇಲ್ಲಿಯವರೆಗೆ ಯಾವುದಾದರೂ ಕಾರ್ಖಾನೆಗೆ ಕಾಂಪೌಂಡ್ ಫೀ ವಸೂಲಾತಿಗಾಗಿ ನೋಟೀಸ್ ನೀಡಲಾಗಿದೆಯೇ ; ನೋಟೀಸ್ ನೀಡಿದ್ದಲ್ಲಿ, ಎಷ್ಟು ಕಾಖಾನೆಗಳು ಸದರಿ ನೋಟೀಸ್‌ಗೆ ಸ್ಪಂದಿಸಿ ಕಾಂಪೌಂಡ್ ಫೀ ಭರಿಸಿರುತ್ತವೆ ? (ಸಂಪೂರ್ಣ ವಿವರ ನೀಡುವುದು)

## ಸರ್ಕಾರ ಬರಪೀಡಿತ ಪ್ರದೇಶಗಳಿಗೆ ಇಲ್ಲಿಯವರೆಗೆ ಬಿಡುಗಡೆ ಮಾಡಿದ ಅನುದಾನದ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):–**

೭೬೯ (೧೦೧೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರವು ಬರಪೀಡಿತ ಪ್ರದೇಶಗಳಿಗೆ ಇಲ್ಲಿಯವರೆಗೆ ಬಿಡುಗಡೆ ಮಾಡಿದ ಅನುದಾನ ಎಷ್ಟು ; ಬಿಡುಗಡೆ ಮಾಡಲಾದ ಅನುದಾನ ಪೈಕಿ ಇಲ್ಲಿಯವರೆಗೆ ನೀಡಲಾದ ಪರಿಹಾರ ಧನ ಎಷ್ಟು ; (ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು)

(ಆ) ಹೆಚ್ಚುವರಿ ಅನುದಾನ ಕೋರಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ ; ಇದ್ದಲ್ಲಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಎಷ್ಟು ? (ಮಾಹಿತಿ ನೀಡುವುದು)

## ಹೈದ್ರಾಬಾದ್–ಕರ್ನಾಟಕ ಭಾಗದ ಆರು ಜಿಲ್ಲೆಗಳಲ್ಲಿ "ಕೆರೆ ತುಂಬಿಸುವ" ಯೋಜನೆಯ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):–**

೭೭೦ (೧೦೨೧) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೈದ್ರಾಬಾದ್–ಕರ್ನಾಟಕ ಆರು ಜಿಲ್ಲೆಗಳಲ್ಲಿ ಕೆರೆಗಳನ್ನು ತುಂಬಿಸುವ ಯೋಜನೆ ಸರ್ಕಾರದ ಮುಂದಿದೆಯೇ ; ಇದ್ದಲ್ಲಿ (ಸಂಪೂರ್ಣ ಮಾಹಿತಿ ನೀಡುವುದು)

(ಆ) ಸದರಿ ಕೆರೆ ತುಂಬಿಸುವ ಯೋಜನೆಯಡಿಯಲ್ಲಿ ಯಾವ ಕೆರೆಗಳು/ ಜಲಾಶಯಗಳ ಪ್ರಸ್ತಾವನೆಗಳು ಸರ್ಕಾರದ ಮುಂದಿವೆ ; (ಜಿಲ್ಲಾವಾರು, ಯೋಜನೆವಾರು, ಯೋಜನಾವೆಚ್ಚವಾರು ಸಂಪೂರ್ಣ ಮಾಹಿತಿ ನೀಡುವುದು)

(ಇ) ಸದರಿ ಯೋಜನೆಯ ಕಾಮಗಾರಿಗಳನ್ನು ಯಾವ ಕಾಲಮಿತಿಯೊಳಗೆ ಪ್ರಾರಂಭಿಸಲಾಗುವುದು ? (ಮಾಹಿತಿ ನೀಡುವುದು)

## ಹೈದ್ರಾಬಾದ್–ಕರ್ನಾಟಕ ಆರು ಜಿಲ್ಲೆಗಳಲ್ಲಿರುವ "ಟೆಕ್ಸ್‌ಟೈಲ್ ಪಾರ್ಕ್" ಯೋಜನೆಯ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):–**

೭೭೧ (೧೦೨೦) ಮಾನ್ಯ ಜವಳಿ ಹಾಗೂ ಮುಜರಾಯಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೈದ್ರಾಬಾದ್–ಕರ್ನಾಟಕ ಆರು ಜಿಲ್ಲೆಗಳಲ್ಲಿರುವ "ಟೆಕ್ಸ್‌ಟೈಲ್ ಪಾರ್ಕ್‌ಗಳು" ಎಷ್ಟು ; (ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು)

(ಆ) ಸದರಿ ಟೆಕ್ಸ್‌ಟೈಲ್ ಪಾರ್ಕ್‌ಗಳ ಯೋಜನೆ ಸಂಪೂರ್ಣವಾಗಿ ಪೂರ್ಣಗೊಂಡಿದೆಯೇ ; ಪೂರ್ಣಗೊಂಡಿದ್ದರೆ, (ಜಿಲ್ಲಾವಾರು ಟೆಕ್ಸ್‌ಟೈಲ್‌ವಾರು ಮತ್ತು ನಿವೇಶನ ಸಂಖ್ಯೆಗಳ ಸಂಪೂರ್ಣ ವಿವರ ನೀಡುವುದು)

(ಇ) ಸದರಿ ಟೆಕ್ಸ್‌ಟೈಲ್ ಪಾರ್ಕ್‌ಗೆ ಮಂಜೂರಾದ, ಹಂಚಿಕೆಯಾದ ನಿವೇಶನಗಳ ಸಂಖ್ಯೆ ಹಾಗೂ ಇದರಿಂದಾಗಿ ಸೃಷ್ಠಿಯಾದ ಉದ್ಯೋಗಗಳ ಸಂಖ್ಯೆ ಎಷ್ಟು ; (ಸಂಪೂರ್ಣ ವಿವರ ನೀಡುವುದು)

(ಈ) ಜವಳಿ ಹಾಗೂ ಸಿದ್ಧ ಉಡುಪು ಉದ್ಯಮಕ್ಕೆ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ವಿಶೇಷ ಅನುದಾನವೇನಾದರೂ ಘೋಷಣೆ ಮಾಡಲಾಗಿದೆಯೇ ; ಇದ್ದಲ್ಲಿ, ಘೋಷಣೆ ಮಾಡಲಾದ ಅನುದಾನ ಎಷ್ಟು ? (ಜಿಲ್ಲಾವಾರು ತಯಾರಿಸಲಾದ ಕ್ರಿಯಾ ಯೋಜನೆ ವಿವರ ನೀಡುವುದು)

## DGET ಗೆ ಸಮಾನವಾದ ವೇತನ ನೀಡುವ ಬಗ್ಗೆ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):–**

೭೭೨ (೧೦೩೦) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರಿ ಐ.ಟಿ.ಐ ಗಳಲ್ಲಿ ಶಾಲಾ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಹಾಗೂ ಬೋಧಕೇತರರಲ್ಲಿ DGETಗೆ ಸಮಾನವಾದ ವೇತನ ಪಡೆಯುತ್ತಿರುವ ಸಂಖ್ಯೆ ಎಷ್ಟು ; ಪಡೆಯದೇ ಇರುವವರ ಸಂಖ್ಯೆ ಎಷ್ಟು ;

(ಆ) DGETಗೆ ಸಮಾನವಾದ ವೇತನ ನೀಡುವಲ್ಲಿ ತಾರತಮ್ಯ ಉಂಟಾಗಿದೆಯೇ ; ಉಂಟಾಗಿದ್ದಲ್ಲಿ, ಕಾರಣವೇನು ; ಈ ಸಮಸ್ಯೆ ಬಗ್ಗೆ ಗಮನಹರಿಸಿ ಸಮಾನವಾದ ವೇತನ ಪಡೆಯದೇ ಇರುವವರಿಗೆ ಸಮಾನ ವೇತನ ನೀಡಲಾಗುವುದೇ ? (ಸಂಪೂರ್ಣ ವಿವರ ನೀಡುವುದು)

## ಪ್ರೊಬೆಷನರಿ ಅವಧಿ ಘೋಷಣೆ ಮಾಡುವ ಬಗ್ಗೆ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):–**

೭೭೩ (೧೦೩೧) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೧ರಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ಆಯ್ಕೆಯಾದ ಕಿರಿಯ ತರಬೇತಿ ಅಧಿಕಾರಿಗಳ ಸಂಖ್ಯೆ ಎಷ್ಟು ;

(ಆ) ಈ ಅಧಿಕಾರಿಗಳ ಪ್ರೊಬೆಷನರಿ ಅವಧಿ ಮುಕ್ತಾಯಗೊಂಡಿದೆಯೇ ;

(ಇ) ಮುಕ್ತಾಯಗೊಂಡಿದ್ದಲ್ಲಿ, ಇವರುಗಳಿಗೆ ಪ್ರೊಬೆಷನರಿ ಅವಧಿ ಘೋಷಣೆ ಮಾಡಲಾಗಿದೆಯೇ ; ಮಾಡದಿದ್ದಲ್ಲಿ, ಯಾವಾಗ ಮಾಡಲಾಗುವುದು ?

## ITI ಶಿಕ್ಷಣಕ್ಕೆ ಆಡಳಿತ ಸಂರಚನೆ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):–**

೭೭೪ (೧೦೨೯) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಐ.ಟಿ.ಐ. ಶಿಕ್ಷಣವನ್ನು ಸರ್ಕಾರವೇ ನಡೆಸಿಕೊಂಡು ಹೋಗುತ್ತಿದ್ದು ಇದರ ಆಡಳಿತ ಸಂರಚನೆಯು ಸಂಪೂರ್ಣ ವಿವರ ನೀಡುವುದು ; (ನಿಯಮಾವಳಿಗಳ ಸಹಿತ)

(ಆ) ಈ ಇಲಾಖೆಯಲ್ಲಿರುವ ಮಂಜೂರಾದ ಹುದ್ದೆಗಳು ಯಾವುವು ಹಾಗೂ ಎಷ್ಟು ;

(ಆ) ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ ಎಷ್ಟು ; ಹುದ್ದೆವಾರು ವಿವರ ನೀಡುವುದು ಖಾಲಿ ಇರುವ ಹುದ್ದೆಗಳ ವಿವರ ನೀಡುವುದು ; ಈ ಇಲಾಖೆಯ ಪುನರ್‌ರಚನೆಯ ಕಾರ್ಯ ನಡೆಯುತ್ತಿದೆಯೇ ;

(ಈ) ಈ ಇಲಾಖೆಯ ಮುಖಾಂತರ ಸರ್ಕಾರ ಯೋಚಿಸಿರುವ ನೂತನ ಕಾರ್ಯ ನೀತಿ ಏನು ?

## ಐ.ಟಿ.ಐ. ಸಿಬ್ಬಂದಿಗಳಿಗೆ ವಿಶೇಷ ಭತ್ಯೆ ನೀಡುವ ಬಗ್ಗೆ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):–**

೭೭೫ (೧೦೨೮) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಐ.ಟಿ.ಐ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಶಿಕ್ಷಕರುಗಳಿಗೆ ನೀಡಲಾಗುವ ವಿಶೇಷ ಭತ್ಯೆಯನ್ನು ನೀಡುವಂತೆ ಇವರಿಗೂ ನೀಡಲು ಸರ್ಕಾರದ ಕ್ರಮ ಏನು ;

(ಆ) ಇದನ್ನು ನೀಡಲು ಸರ್ಕಾರಕ್ಕೆ ಇರುವ ಅಡೆತಡೆಗಳೇನು ;

(ಇ) ನೀಡಿದಲ್ಲಿ, ಸರ್ಕಾರಕ್ಕೆ ತಗಲುವ ಆರ್ಥಿಕ ವೆಚ್ಚ ಎಷ್ಟು ;

(ಈ) ಸಮಸ್ಯೆಗಳನ್ನು ಸರಿಪಡಿಸಿ ನೀಡಲು ಸರ್ಕಾರ ಮುಂದಾಗುವುದೇ ?

## ಶಾಲಾವನ ಯೋಜನೆಯ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೭೭೬ (೧೦೬೫) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತಾಲ್ಲೂಕಿಗೊಂದು ಹಸಿರು ಶಾಲಾವನ ಎಂಬ ಯೋಜನೆಯನ್ನು ಯಾವಾಗ ಅನುಷ್ಠಾನಕ್ಕೆ ತರಲಾಯಿತು ;

(ಆ) ಈ ಯೋಜನೆಯಡಿ ಮಂಡ್ಯ ಜಿಲ್ಲೆಯಲ್ಲಿ ಎಷ್ಟು ತಾಲ್ಲೂಕುಗಳಲ್ಲಿ ಹಸಿರು ಶಾಲಾವನ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ ; (ತಾಲ್ಲೂಕುವಾರು, ಶಾಲಾವಾರು ವಿವರ ನೀಡುವುದು)

(ಇ) ಸದರಿ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಕಾಲಾವಧಿಯನ್ನು ನಿಗದಿಪಡಿಸಲಾಗಿದೆಯೇ ; ಹಾಗಿದ್ದಲ್ಲಿ, ಮಾಹಿತಿ ನೀಡುವುದು ;

(ಈ) ಶಾಲಾವನದಲ್ಲಿ ಬೆಳೆಸಲಾಗುತ್ತಿರುವ ಮರ, ಗಿಡ, ಸಸಿಗಳಾವುವು ; (ವಿವರ ನೀಡುವುದು)

(ಉ) "ತಾಲ್ಲೂಕಿಗೊಂದ ಹಸಿರು ಶಾಲಾವನ" ಯೋಜನೆಯ ನಿಯಮದ ರೂಪುರೇಷೆಗಳೇನು ; ಮಾರ್ಗಸೂಚಿಗಳೇನು ? (ವಿವರ ನೀಡುವುದು)

## ಸರ್ಕಾರಿ ಕಾಲೇಜುಗಳಲ್ಲಿ ಉದ್ಯೋಗ ಮೇಳದ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೭೭೭ (೧೦೬೩) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾರ್ಮಿಕ ಇಲಾಖೆ ಆಯೋಜಿಸುತ್ತಿರುವ ಉದ್ಯೋಗ ಮೇಳಗಳ ಪರಿಕಲ್ಪನೆ ಏನು ; (ವಿವರ ನೀಡುವುದು)

(ಆ) ಈ ಉದ್ಯೋಗ ಮೇಳಗಳನ್ನು ಇದುವರೆವಿಗೆ ಯಾವ ಯಾವ ಜಿಲ್ಲೆಗಳಲ್ಲಿ ನಡೆಸಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಇ) ಮಂಡ್ಯ ಜಿಲ್ಲೆಯಲ್ಲಿ ಉದ್ಯೋಗ ಮೇಳ ಕೈಗೊಳ್ಳಲಾಗಿದೆಯೇ ; ಹಾಗಿದ್ದಲ್ಲಿ, ಎಷ್ಟು ನಿರುದ್ಯೋಗಿಗಳಿಗೆ ಉದ್ಯೋಗ ದೊರಕಿದೆ ; (ವಿವರ ನೀಡುವುದು)

(ಈ) ಉದ್ಯೋಗ ನೋಂದಣಿ ಕಛೇರಿಗಳ ಈಗಿನ ಸ್ಥಿತಿಗತಿ ಏನು ; ಹಿಂದೆ ನೋಂದಣಿ ಮಾಡಿದ ನಿರುದ್ಯೋಗಿಗಳ ಬಗ್ಗೆ ಸರ್ಕಾರ ಯಾವ ಕ್ರಮ ವಹಿಸಿದೆ ? (ವಿವರ ನೀಡುವುದು)

## ಬರಪೀಡಿತ ಜಿಲ್ಲೆಗಳ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೭೭೮ (೧೦೬೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಬರಪೀಡಿತ ಜಿಲ್ಲೆಗಳಾವುವು ;

(ಆ) ಮಂಡ್ಯ ಜಿಲ್ಲೆಯನ್ನು ಬರಪೀಡಿತ ಜಿಲ್ಲೆಯನ್ನಾಗಿ ಗುರುತಿಸಲು ಸರ್ಕಾರ ಕೈಗೊಂಡ ಕ್ರಮವೇನು ;

(ಇ) ಬರಪೀಡಿತ ಜಿಲ್ಲೆಗಳಿಗೆ ಸರ್ಕಾರ ಕೈಗೊಂಡ ಕ್ರಮಗಳೇನು ;

(ಈ) ಬರಪೀಡಿತ ಜಿಲ್ಲೆಗಳಿಗೆ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವೆಷ್ಟು ; ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವೆಷ್ಟು ? (ಜಿಲ್ಲಾವಾರು ವಿವರ ನೀಡುವುದು)

## ಚಿಕ್ಕಬಳ್ಳಿ ಕೆರೆಯ ಪಿಕಪ್ ನಾಲೆ ದುರಸ್ಥಿ ಬಗ್ಗೆ

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೭೭೯ (೧೦೬೨) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಡ್ಯ ಜಿಲ್ಲೆ, ಕೆರೆಗೋಡು ಹೋಬಳಿ, ಚಿಕ್ಕಬಳ್ಳಿ ಕೆರೆಯ ಪಿಕಪ್ ನಾಲೆಯ ಅಭಿವೃದ್ಧಿ ಕಾಮಗಾರಿ ಅಂದಾಜಿನಲ್ಲಿ ಗೂಳೂರು ಬೆಟ್ಟದ ಬಳಿ ೧೫೦ ಮೀ. ಉದ್ದದ ಮೇಲ್ಗಾಲುವೆಯನ್ನು ನಿರ್ಮಿಸುವ ಸಂಬಂಧ ಸಮೀಕ್ಷಾ ಕಾರ್ಯ ಕೈಗೊಂಡು ವಿನ್ಯಾಸ ಹಾಗೂ ಸಾಧ್ಯಾಸಾಧ್ಯತೆ ಬಗ್ಗೆ ಪರಿಶೀಲನೆ ನಡೆಸಲಾಗಿದೆಯೇ ;

(ಆ) ಹಾಗಿದ್ದಲ್ಲಿ, ಸಮೀಕ್ಷಾ ಕಾರ್ಯ ಹಾಗೂ ಸಾಧ್ಯಾಸಾಧ್ಯತೆಯ ವರದಿಯ ಪ್ರಮುಖ ಅಂಶಗಳೇನು ; (ವರದಿಯ ಪ್ರತಿ ಒದಗಿಸುವುದು)

(ಇ) ಸದರಿ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ; ಯಾವಾಗ ಪೂರ್ಣಗೊಳಿಸಲಾಗುವುದು ; ಕಾಮಗಾರಿ ಪೂರ್ಣಗೊಳಿಸಲು ಕಾಲಮಿತಿ ಹಾಕಿಕೊಳ್ಳಲಾಗಿದೆಯೇ ;

(ಈ) ದುಸ್ಥಿತಿಯಲ್ಲಿರುವ ತೂಬುಗಳನ್ನು ದುರಸ್ಥಿಗೊಳಿಸಿ ಖಾಯಂ ತೂಬುಗಳನ್ನು ಅಳವಡಿಸಲಾಗಿದೆಯೇ ; ಹಾಗಿದ್ದಲ್ಲಿ, ಖಾಯಂ ತೂಬುಗಳನ್ನು ಎಲ್ಲೆಲ್ಲಿ ಅಳವಡಿಸಲಾಗಿದೆ ? (ವಿವರ ನೀಡುವುದು)

## ಉತ್ತರ ಕರ್ನಾಟಕ ರೈತರಿಗೆ ಮೀನುಗಾರಿಕೆ ಇಲಾಖೆಯ ಮಾಹಿತಿ ಬಗ್ಗೆ

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೭೮೦ (೯೨೯) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉತ್ತರ ಕರ್ನಾಟಕದ ರೈತರಿಗೆ ಮೀನುಗಾರಿಕೆ ಮತ್ತು ಮತ್ಸ್ಯೋದ್ಯಮಕ್ಕೆ ಸಂಬಂಧಪಟ್ಟಂತೆ ಯಾವುದೇ ಸರಿಯಾದ ಮಾಹಿತಿ ಸಿಗದೇ ಇರುವುದರಿಂದ ಮೀನುಗಾರಿಕೆಗೆ ಸಂಬಂಧಿಸಿದ ಯೋಜನೆಗಳು ಈ ಭಾಗದಲ್ಲಿ ಸಂಪೂರ್ಣವಾಗಿ ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮವೇನು ; (ಸಂಪೂರ್ಣ ವಿವರ ನೀಡುವುದು)

(ಆ) ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಯಲ್ಲಿ ಎಷ್ಟು ಮೀನುಗಾರಿಕಾ ತರಬೇತಿ ಕೇಂದ್ರಗಳಿವೆ ; ಈಗಾಗಲೇ ಎಷ್ಟು ಜನ ರೈತರಿಗೆ ತರಬೇತಿಯನ್ನು ನೀಡಲಾಗಿದೆ ; (ಹೆಸರು ವಿಳಾಸ ಸಹಿತ ಸಂಪೂರ್ಣ ಮಾಹಿತಿ ನೀಡುವುದು)

(ಇ) ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಗೆ ಸಂಬಂಧಿಸಿದಂತೆ ಮೀನುಗಾರಿಕೆಗೆ ಎಷ್ಟು ಅನುದಾನ ನಿಗದಿಪಡಿಸಲಾಗಿತ್ತು ; ಇಲ್ಲಿಯವರೆಗೆ ಎಷ್ಟು ಅನುದಾನವನ್ನು ಬಳಕೆ ಮಾಡಲಾಗಿದೆ ? (ವರ್ಷವಾರು ಸಂಪೂರ್ಣ ವಿವರ ನೀಡುವುದು)

## ರಾಜ್ಯದಲ್ಲಿರುವ ಗೋಮಾಳಗಳ ವಿಸ್ತೀರ್ಣಗಳ ಬಗ್ಗೆ

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೭೮೧ (೯೨೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಗೋಮಾಳಗಳ ವಿಸ್ತೀರ್ಣವೆಷ್ಟು ; (ಗ್ರಾಮ ಪಂಚಾಯತ್, ಪಟ್ಟಣ ಪಂಚಾಯತ್, ನಗರವಾರು ಮಾಹಿತಿ ನೀಡುವುದು) ಸದರಿ ಗೋಮಾಳಗಳ ಪೈಕಿ ಎಷ್ಟು ಭೂಮಿಯನ್ನು ಸರ್ಕಾರದ ಬೇರಾವುದಾದರೂ ಯೋಜನೆಗೆ ಹಸ್ತಾಂತರ ನೀಡಲಾಗಿದೆ ; (ಸಂಪೂರ್ಣ ವಿವರ ನೀಡುವುದು)

(ಆ) ರಾಜ್ಯದ ಗೋಮಾಳಗಳ ನಿರ್ವಹಣೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಇಲ್ಲಿಯವರೆಗೆ ಖರ್ಚು ಮಾಡಿದ ವಿವರಗಳನ್ನು ಗ್ರಾಮ ಪಂಚಾಯತ್, ಪಟ್ಟಣ ಪಂಚಾಯತ್, ನಗರವಾರು, ನಿರ್ವಹಣೆ ಮಾಡಿದ ಸಂಸ್ಥೆ ಅಥವಾ ಪ್ರಾಧಿಕಾರ, ಸದರಿಯವರೆಗೆ ಅನುದಾನ ಬಿಡುಗಡೆ ಮಾಡಿದ ವರ್ಷ, ಅನುದಾನದ ಬಳಕೆ ಪ್ರಮಾಣ ಪತ್ರ ಸಮೇತ ಸಂಪೂರ್ಣ ವಿವರಗಳನ್ನು ನೀಡುವುದು ;

(ಇ) ರಾಜ್ಯದ ಗೋಮಾಳಗಳಲ್ಲಿ ಇಲ್ಲಿಯವರೆಗೆ ಎಷ್ಟು ಮೇವು ಉತ್ಪಾದನೆ ಮಾಡಲಾಗಿದೆ ; (ಸಂಪೂರ್ಣ ವಿವರ ನೀಡುವುದು) ಉತ್ಪಾದನೆ ಮಾಡಿದ್ದಲ್ಲಿ, ಅದರಿಂದ ಪ್ರಯೋಜನ ಪಡೆದುಕೊಂಡ ಫಲಾನುಭವಿಗಳೆಷ್ಟು ?

## ಕಂದಾಯ ಇಲಾಖೆಯಲ್ಲಿ ಕರ್ತವ್ಯಗಳು ಮತ್ತು ಜವಾಬ್ದಾರಿಗಳ ಬಗ್ಗೆ

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೭೮೨ (೯೨೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಂದಾಯ ಇಲಾಖೆಯ ಕರ್ತವ್ಯಗಳು ಹಾಗೂ ಜವಾಬ್ದಾರಿಗಳೇನು ; (ಸಂಪೂರ್ಣ ವಿವರ ನೀಡುವುದು)

(ಆ) ಕಂದಾಯ ಇಲಾಖೆಯ ಅಂಗ ಇಲಾಖೆಗಳು ಯಾವುವು ; (ಸಂಪೂರ್ಣ ವಿವರ ನೀಡುವುದು)

(ಇ) ಕಂದಾಯ ಇಲಾಖೆಯಿಂದ ಯಾವ ಯಾವ ಯೋಜನೆಗಳ ಅನುಷ್ಠಾನವನ್ನು ಮಾಡಲಾಗುತ್ತಿದೆ ? (ಸಂಪೂರ್ಣ ವಿವರ ನೀಡುವುದು)

## ಪುನರ್ ವಸತಿ ಕೇಂದ್ರಗಳ ಬಗ್ಗೆ

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೭೮೩ (೯೩೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಿಜಯಪುರ, ಬಾಗಲಕೋಟೆ ಜಿಲ್ಲೆಗಳಲ್ಲಿ ಪುನರ್ ವಸತಿ ಹಾಗೂ ಪುನರ್ ನಿರ್ಮಾಣ ಕೇಂದ್ರಗಳಿಗಾಗಿ ಕಳೆದ ೫ ವರ್ಷಗಳಲ್ಲಿ ಯಾವ ಯಾವ ಗ್ರಾಮಗಳಿಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ ; (ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಅಭಿವೃದ್ಧಿಗೆ ಹಣ ಬಿಡುಗಡೆ ಮಾಡಿದ ನಂತರ ಅಭಿವೃದ್ಧಿಯಾದ ಸದರಿ ಗ್ರಾಮಗಳನ್ನು ಗ್ರಾಮ ಪಂಚಾಯಿತಿಗೆ ಹಸ್ತಾಂತರಿಸಿಲ್ಲವೆಂಬ ಆರೋಪವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಹಸ್ತಾಂತರ ಮಾಡದೆ ಇರಲು ಕಾರಣವೇನು ; ಹಾಗಿದ್ದಲ್ಲಿ, ಸದರಿ ಅಭಿವೃದ್ಧಿ ಹೊಂದಿದ ಗ್ರಾಮಗಳನ್ನು ಯಾವ ಕಾಲಮಿತಿಯ ಒಳಗಾಗಿ ಗ್ರಾಮ ಪಂಚಾಯತಿಗಳಿಗೆ ಹಸ್ತಾಂತರ ಮಾಡಲಾಗುವುದು ? (ವಿವರಗಳೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು)

## ೨೦೧೬-೧೭ನೇ ಸಾಲಿನಲ್ಲಿ ಅರಣ್ಯ ಇಲಾಖೆಗೆ ಬಿಡುಗಡೆಯಾದ ಅನುದಾನದ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೭೮೪ (೧೦೨೫) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಅರಣ್ಯ ಪ್ರದೇಶ ಹೆಚ್ಚಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ೨೦೧೬-೧೭ನೇ ಸಾಲಿನಲ್ಲಿ ಅರಣ್ಯ ಇಲಾಖೆಗೆ ಬಿಡುಗಡೆಯಾದ ಅನುದಾನ ಎಷ್ಟು ; ಇಲ್ಲಿವರೆಗೂ ಖರ್ಚು ಮಾಡಿದ ಮೊತ್ತವೆಷ್ಟು ? (ವಿವರ ನೀಡುವುದು)

## ನೀರಾವರಿ ಇಲಾಖೆಗೆ ಸೇರಿರುವ ಖಾಲಿ ನಿರುಪಯೋಗವಾಗಿರುವ ಜಾಗಗಳನ್ನು ಸರ್ಕಾರದ ಇತರೆ ಇಲಾಖೆಗೆ ಹಸ್ತಾಂತರಿಸುವ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೭೮೫ (೧೦೨೬) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) NRBC ೯೫ ಕಿಲೋಮೀಟರ್‌ನಿಂದ ೧೬೮ ಕಿಲೋಮೀಟರ್‌ವರೆಗೂ ಮುಖ್ಯ ಕಾಲುವೆ ನಿರ್ಮಾಣ ಮುಂದುವರೆಯುತ್ತಿದೆ ; ಇದರ ಉಪ ಕಾಲುವೆ ಮತ್ತು ಇತರೆ ಕಾಮಗಾರಿಗಳನ್ನು ಪ್ರಾರಂಭ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ನೀರಾವರಿ ಇಲಾಖೆಗೆ ಸೇರಿರುವ ವಿವಿಧ ಭಾಗಗಳಲ್ಲಿ ಇರುವ ನಿರುಪಯೋಗವಾಗಿರುವ ಖಾಲಿ ಜಾಗಗಳನ್ನು ಸರ್ಕಾರದ ಇತರೆ ಇಲಾಖೆಗಳ ಉಪಯೋಗಕ್ಕೆ ಹಸ್ತಾಂತರಿಸುವ ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) ರಾಯಚೂರು ಜಿಲ್ಲೆಯಲ್ಲಿ ಬರುವ ಗಣೆಕಲ್ ರಿಸರ್ವಾಯರ್ ಬ್ಯಾರೇಜ್ (TLBC) ನಲ್ಲಿ ಹೂಳು ತೆಗೆದು ಅಭಿವೃದ್ಧಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಈ) ತುಂಗಾಭದ್ರಾ ಉಪ ಕಾಲುವೆಗಳಲ್ಲಿ ಗಿಡ ಮತ್ತು ಹುಲ್ಲು ಬೆಳೆದು ನೀರು ಸರಬರಾಜಿನಲ್ಲಿ ಆಗುವ ತೊಂದರೆ ಸರಿಪಡಿಸಲು ಮತ್ತು ಸ್ವಚ್ಛ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಉ) ತುಂಗಾಭದ್ರಾ ಎಡದಂಡೆಯ ಉಪ ಕಾಲುವೆಗಳ ಸರ್ವೀಸ್ ರಸ್ತೆಗಳನ್ನು ರೈತರಿಗೆ ಅನುಕೂಲವಾಗಲು ರಸ್ತೆ ಅಭಿವೃದ್ಧಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ರಾಯಚೂರು ಜಿಲ್ಲೆಯ ರೈತರಿಗೆ ನೀಡಿರುವ ಬೆಳೆ ಪರಿಹಾರದ ಮೊತ್ತದ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೭೮೬ (೧೦೨೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೫–೧೬ ಮತ್ತು ೨೦೧೬–೧೭ನೇ ಸಾಲಿನಲ್ಲಿ ರಾಯಚೂರು ಜಿಲ್ಲೆಯಲ್ಲಿ ಬೆಳೆ ಪರಿಹಾರದಿಂದ ರೈತರಿಗೆ ಕೊಟ್ಟಿರುವ ಒಟ್ಟು ಮೊತ್ತ ಎಷ್ಟು ; ಬೆಳೆ ಪರಿಹಾರ ಪಡೆದ ರೈತರ ಸಂಖ್ಯೆ ಎಷ್ಟು ;

(ಆ) ಮಾನ್ವಿ ತಾಲ್ಲೂಕಿನ ಬಾಕಿ ನೀಡಬೇಕಾದ ಬೆಳೆ ಪರಿಹಾರ ಮೊತ್ತ ಎಷ್ಟು ; ಅರ್ಹ ಫಲಾನುಭವಿಗಳಿಗೆ ಬೆಲೆ ಪರಿಹಾರ ನೀಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) ರಾಯಚೂರು ಜಿಲ್ಲೆಯಲ್ಲಿ ಸರ್ವೇಯರ್ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ರಾಯಚೂರು ನಗರ ಮತ್ತು ಮಾನ್ವಿ ಪಟ್ಟಣದಲ್ಲಿ ಕ್ರೀಡಾಂಗಣ ನಿರ್ಮಾಣದ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೭೮೭ (೧೦೨೬) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಯಚೂರು ಜಿಲ್ಲೆಯ ಮಾನ್ವಿ ಪಟ್ಟಣದಲ್ಲಿ ಕ್ರೀಡಾಂಗಣ (ತಾಲ್ಲೂಕು ಕ್ರೀಡಾಂಗಣ) ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ರಾಯಚೂರು ನಗರದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಲಕ್ಷ್ಮಣ ತೀರ್ಥ ನದಿಯಿಂದ ಚೆಲ್ಕುಂದ ಗ್ರಾಮಕ್ಕೆ ನೀರಿನ ಯೋಜನೆ ವಿಚಾರ

**ಶ್ರೀ ಭಾನುಪ್ರಕಾಶ (ವಿಧಾನಸಭೆಯಿಂದ ಚುನಾಯಿತರಾದವರು):–**

೭೮೮ (೧೦೫೮) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಲಕ್ಷ್ಮಣ ತೀರ್ಥ ನದಿಯಿಂದ ಚೆಲ್ಕುಂದ ಗ್ರಾಮದ ಸ.ನಂ. ೩೦೫ ಸರ್ಕಾರಿ ಕೆರೆಗೆ ನೀರು ತುಂಬಿಸುವ ಯೋಜನೆಗೆ ಬಿಡುಗಡೆಯಾದ ಮೊತ್ತ ಎಷ್ಟು ; ಕಾಮಗಾರಿ ಪ್ರಾರಂಭವಾದ ದಿನ ಹಾಗೂ ಮುಕ್ತಾಯವಾದ ದಿನಾಂಕ, ಕಾಮಾಗಾರಿ ಮಾಡಿದ ಗುತ್ತಿಗೆದಾರನ ಹೆಸರು, ಗುತ್ತಿಗೆದಾರನಿಗೆ ಸಂದಾಯ ಮಾಡಿರುವ ಮೊತ್ತದ ವಿವರ ನೀಡುವುದು ;

(ಆ) ಈ ಯೋಜನೆಯಲ್ಲಿ ಕಳಪೆ ಕಾಮಗಾರಿ ಮಾಡಿರುವ ಬಗ್ಗೆ ಸರ್ಕಾರಕ್ಕೆ ದೂರು ಬಂದಿದೆಯೇ ;

(ಇ) ಬಂದಿದ್ದಲ್ಲಿ, ಈ ದೂರಿನ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ? (ಸಂಪೂರ್ಣ ವಿವರ ನೀಡುವುದು)

## ಕೃಷಿ ಜಮೀನಿನ ಭೂ ಪರಿವರ್ತನೆ ಕುರಿತು

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೭೮೯ (೧೦೬೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಕೃಷಿ ಜಮೀನುಗಳನ್ನು ಯಾವ ಯಾವ ಉದ್ದೇಶಗಳಿಗಾಗಿ ಭೂ ಪರಿವರ್ತನೆ ಮಾಡಬಹುದಾಗಿದೆ ; (ವಿವರವಾದ ಮಾಹಿತಿ ನೀಡುವುದು)

(ಆ) ಭೂ ಪರಿವರ್ತನೆಗೊಂಡ ಕೃಷಿ ಜಮೀನುಗಳನ್ನು ಆರ್.ಟಿ.ಸಿಯಲ್ಲಿ ಯಾವ ಬದಲಾವಣೆ ಮಾಡದೆ ಅದೇ ರೀತಿ ಮುಂದುವರೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಇದರಿಂದ ಸಮಾಜದಲ್ಲಿ ಸಿವಿಲ್ ವ್ಯಾಜ್ಯಗಳು ಜಾಸ್ತಿಯಾಗಿ ಸಮಾಜದ ಸ್ವಾಸ್ತ್ಯ ಕೆಡುತ್ತಿರುವುದನ್ನು ಸರ್ಕಾರದ ಗಮನಿಸಿದೆಯೇ ;

(ಈ) ಗಮನಿಸಿದ್ದಲ್ಲಿ, ಸರ್ಕಾರವು ಇದರ ಸಂಬಂಧ ಯಾವ ಕ್ರಮ ಕೈಗೊಂಡಿದೆ ;

(ಉ) ಇದನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು ?

## ಅಟಲ್ ಜೀ ಜನಸ್ನೇಹಿ ಕೇಂದ್ರಗಳ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೭೯೦ (೧೧೬೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಅಟಲ್ ಜೀ ಜನಸ್ನೇಹಿ ಕೇಂದ್ರಗಳು ಎಷ್ಟು ; ಅವುಗಳನ್ನು ಯಾವಾಗಿನಿಂದ ಸ್ಥಾಪಿಸಲಾಯಿತು ; ಇದರಿಂದ ಜನರಿಗೆ ದೊರೆಯಬಹುದಾದ ಸೌಲಭ್ಯಗಳಾವುವು ;

(ಆ) ಒಂದು ಅಟಲ್ ಜೀ ಜನಸ್ನೇಹಿ ಕೇಂದ್ರವು ಯಾವ ಯಾವ ಸಾಮಗ್ರಿಗಳನ್ನು ಹೊಂದಿರುತ್ತದೆ ಇದಕ್ಕಾಗಿ ಎಷ್ಟು ಹಣ ಖರ್ಚಾಗಿದೆ ; ಇದನ್ನು ಯಾವ ಆರ್ಥಿಕ ವರ್ಷಗಳಲ್ಲಿ ಬಿಡುಗಡೆ ಮಾಡಲಾಗಿದೆ ;

(ಇ) ಜನರಿಗೆ ತೊಂದರೆಯಾಗದಂತೆ ಸೌಲಭ್ಯ ಪಡೆಯಲು ಸತತ ವಿದ್ಯುತ್ ಸರಬರಾಜು ಮಾಡುವ ಸಂಬಂಧ ಜನಸ್ನೇಹಿ ಕೇಂದ್ರಗಳಲ್ಲಿ ಯಾವ ಕ್ರಮಗಳನ್ನು ಅನುಸರಿಸಲಾಗಿದೆ ; ಇದಕ್ಕಾಗಿ ಖರ್ಚು ಮಾಡಿರುವ ಹಣವೆಷ್ಟು ; (ವಿವರವಾದ ಮಾಹಿತಿ ಕೊಡುವುದು)

(ಈ) ಇದರಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ತಿಂಗಳಿಗೆ ನೀಡುತ್ತಿರುವ ವೇತನವೆಷ್ಟು ? (ಸಿಬ್ಬಂದಿಗಳವಾರು ಸಂಪೂರ್ಣ ಮಾಹಿತಿ ನೀಡುವುದು)

## ಕರ್ನಾಟಕ ಕ್ರಿಕೆಟ್ ಸಂಸ್ಥೆಯ ಕ್ರೀಡಾಂಗಣಗಳ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೭೯೧ (೧೦೭೦) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ ಸಂಸ್ಥೆಯನ್ನು ಯಾವಾಗ ಸ್ಥಾಪಿಸಲಾಯಿತು ; ಇದರ ಧ್ಯೇಯೋದ್ದೇಶ ಹಾಗೂ ನಿಯಮ ನಿಬಂಧನೆಗಳೇನು ; (ವಿವರವಾದ ಮಾಹಿತಿ ನೀಡುವುದು)

(ಆ) ಸದರಿ ಸಂಸ್ಥೆಗೆ ಚಿನ್ನಸ್ವಾಮಿ ಕ್ರೀಡಾಂಗಣ ಜಾಗವನ್ನು ಕ್ರಯ/ಗುತ್ತಿಗೆ ಮಾಡಲಾಗಿದೆಯೇ ; ಯಾವ ದಿನಾಂಕದಿಂದ ಎಷ್ಟು ವರ್ಷಗಳವರೆಗೆ ನೀಡಲಾಗಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಸದರಿ ಸಂಸ್ಥೆಗೆ ಕಳೆದ ೩ ವರ್ಷಗಳಿಂದ ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದಿಂದ ಎಷ್ಟು ಅನುದಾನ ಬಿಡುಗಡೆಯಾಗಿದೆ ; ಇದನ್ನು ಯಾವ ಕಾರ್ಯಗಳಿಗೆ ವಿನಿಯೋಗಿಸಲಾಗಿದೆ ; (ವಿವರವಾದ ಮಾಹಿತಿ ಒದಗಿಸುವುದು)

(ಈ) ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳೆಷ್ಟು ? (ವಿವರವಾಗಿ ಸಿಬ್ಬಂದಿಗಳ ಹೆಸರು, ಹುದ್ದೆಯ ಪದನಾಮ, ವೇತನ ಶ್ರೇಣಿ ಹಾಗೂ ಮೊಬೈಲ್ ಸಂಖ್ಯೆಯೊಂದಿಗೆ ಮಾಹಿತಿ ಒದಗಿಸುವುದು)

## ರಾಜ್ಯ ಹೆದ್ದಾರಿ ನಿರ್ಮಾಣ ಮರ ಕಡಿಯುವ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೭೯೨ (೧೦೬೮) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು, ಗುಬ್ಬಿ ನಗರದಿಂದ ಸಿ.ಎಸ್.ಪುರ ಗ್ರಾಮದವರೆಗೆ ಅರಣ್ಯ ಇಲಾಖೆ ವ್ಯಾಪ್ತಿಗೆ ಬರುವ ರಸ್ತೆ ಬದಿ ಎಷ್ಟು ಮರಗಳನ್ನು ಬೆಳೆಸಲಾಗಿದೆ ;

(ಆ) ಸದರಿ ರಸ್ತೆಯು ಈಗ ರಾಜ್ಯ ಹೆದ್ದಾರಿಯಾಗಿ ಮೇಲ್ದರ್ಜೆಗೆ ಮಾರ್ಪಟ್ಟಿರುವುದು ನಿಜವೇ ;

(ಇ) ರಸ್ತೆ ಅಗಲೀಕರಣ ಸಂಬಂಧ ಮರಗಳನ್ನು ಕಡಿಯಲಾಗಿದೆಯೇ ; ಕಡಿಯದಿದ್ದಲ್ಲಿ, ಯಾವ ಕಾರಣದಿಂದ ಕಡಿಯುವುದಕ್ಕೆ ಸಾಧ್ಯವಿರುವುದಿಲ್ಲ ; ವಿವರವಾದ ಕಾರಣಗಳೊಂದಿಗೆ ಮಾಹಿತಿ ಕೊಡುವುದು ;

(ಈ) ರಾಜ್ಯದ ಬೇರೆ ಕಡೆಗಳಲ್ಲಿ ರಸ್ತೆ ಬದಿಯಿರುವ ಮರಗಳನ್ನು ಕಡಿಯದೆ ರಾಜ್ಯ ಹೆದ್ದಾರಿ ನಿರ್ಮಾಣ ಮಾಡಲಾಗುತ್ತಿದೆಯೇ ? (ವಿವರವಾದ ಮಾಹಿತಿ ನೀಡುವುದು)

## ಮುಜರಾಯಿ ದೇವಸ್ಥಾನಗಳಲ್ಲಿ ದಲಿತ ಅರ್ಚಕರ ನೇಮಕಾತಿ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೭೯೩ (೧೦೧೪) ಮಾನ್ಯ ಜವಳಿ ಹಾಗೂ ಮುಜರಾಯಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಮುಜರಾಯಿ ಇಲಾಖೆಯ ದೇವಸ್ಥಾನಗಳಲ್ಲಿನ ಅರ್ಚಕರ ಹುದ್ದೆಗೆ ನೇಮಕಾತಿ ಯಾವ ರೀತಿ ನಡೆಯುತ್ತದೆ ; ನೇಮಕಾತಿ ಪ್ರಕ್ರಿಯೆಯ ವಿಧಿ ವಿಧಾನಗಳೇನು ;

(ಆ) ದಲಿತ ಅರ್ಚಕರನ್ನು ಯಾವ ಯಾವ ದೇವಸ್ಥಾನಗಳಲ್ಲಿ ನೇಮಿಸಲಾಗಿದೆ ; ನೇಮಿಸದಿದ್ದರೆ, ಕಾರಣಗಳೇನು ;

(ಇ) ಪರಿಶಿಷ್ಠ ಜಾತಿ ಮತ್ತು ವರ್ಗದವರು ಮುಜರಾಯಿ ದೇವಸ್ಥಾನಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆಯೇ ; ಎಷ್ಟು ಜನ ನಿರ್ವಹಿಸುತ್ತಿದ್ದಾರೆ ; ಯಾವ ಯಾವ ಹಂತಗಳಲ್ಲಿ ನಿರ್ವಹಿಸುತ್ತಿದ್ದಾರೆ ;

(ಈ) ಮುಜರಾಯಿ ದೇವಸ್ಥಾನಗಳಲ್ಲಿ ಮಹಿಳಾ ಅರ್ಚಕರನ್ನು ನೇಮಿಸುವ ಚಿಂತನೆ ಸರ್ಕಾರಕ್ಕಿದೆಯೇ ?

## ಸಬ್ ರಿಜಿಸ್ಟ್ರಾರ್ ಕಛೇರಿಗಳಲ್ಲಿ ಭ್ರಷ್ಠಾಚಾರ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೭೯೪ (೧೦೧೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಬ್ ರಿಜಿಸ್ಟ್ರಾರ್ ಕಛೇರಿಗಳಲ್ಲಿ ನಡೆಯುತ್ತಿರುವ ವ್ಯಾಪಕ ಭ್ರಷ್ಠಾಚಾರವನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;

(ಆ) ಕಳೆದ ೩ ವರ್ಷಗಳಲ್ಲಿ ಎಷ್ಟು ಕಛೇರಿಗಳಿಗೆ ಮೇಲಾಧಿಕಾರಿಗಳು ದಾಳಿ ಮಾಡಿ ಕ್ರಮ ಕೈಗೊಂಡಿದ್ದಾರೆ ; ಯಾವ ರೀತಿಯ ಕ್ರಮ ಕೈಗೊಂಡಿದ್ದಾರೆ ;

(ಇ) ಈ ಕಛೇರಿಗಳಲ್ಲಿ ದಳ್ಳಾಳಿಗಳು ಭ್ರಷ್ಠಾಚಾರಕ್ಕೆ ಮುಖ್ಯ ಕಾರಣಕರ್ತರಾಗಿದ್ದು, ಅದನ್ನು ತಡೆಗಟ್ಟಲು ಸರ್ಕಾರ ಏಕೆ ಹೆಚ್ಚು ಗಮನ ಹರಿಸಿಲ್ಲ ; ಸಬ್ ರಿಜಿಸ್ಟ್ರಾರ್ ಕಛೇರಿಯ ಆವರಣದಲ್ಲಿ ಸಿ.ಸಿ. ಕ್ಯಾಮರಗಳನ್ನು ಅಳವಡಿಕೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಹಾಗಿದ್ದಲ್ಲಿ, ಎಷ್ಟು ದಿನಗಳಲ್ಲಿ ಅಳವಡಿಸಲಾಗುವುದು ?

## "ಕಂದಾಯ ಅದಾಲತ್" ಕಾರ್ಯಕ್ರಮದ ಬಗ್ಗೆ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೭೯೫ (೧೧೧೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರ ಹೊಸದಾಗಿ ಜಾರಿಗೆ ತಂದಿರುವ "ಕಂದಾಯ ಅದಾಲತ್" ಕಾರ್ಯಕ್ರಮದಲ್ಲಿ ಇದುವರೆಗೆ ಎಷ್ಟು ಅರ್ಜಿಗಳು ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಬಂದಿವೆ ; ಅವುಗಳಲ್ಲಿ ಎಷ್ಟು ಇತ್ಯರ್ಥವಾಗಿವೆ ;

(ಆ) ಪಿತ್ರಾರ್ಜಿತ ಆಸ್ತಿಗಳ ಮೂಲ ದಾಖಲೆಗಳಿಲ್ಲ ಎಂಬ ಕಾರಣಕ್ಕೆ ಅವರ ವಾರಸುದಾರರಿಗೆ ಖಾತೆ ಮಾಡಲು ಸಾದ್ಯವಾಗುತ್ತಿಲ್ಲ ; ಅಂತಹ ಪ್ರಕರಣಗಳಲ್ಲಿ ಕಂದಾಯಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಅಕ್ಕಪಕ್ಕದವರಿಂದ ವಿವರಣೆ ಪಡೆದು, ಖಾತ್ರಿಪಡಿಸಿಕೊಂಡು ಖಾತೆ ಮಾಡಿಕೊಡಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ ;

(ಇ) "ಕಂದಾಯ ಅದಾಲತ್" ಕಾರ್ಯಕ್ರಮಗಳಲ್ಲಿ ಇಂತಹ ಪ್ರಕರಣಗಳು ಬಂದಿದೆಯೇ ; ಬಂದಿದ್ದಲ್ಲಿ, ಇಂತಹ ಪ್ರಕರಣಗಳನ್ನು ಇತ್ಯರ್ಥಪಡಿಸಿದ್ದೀರಾ ;

(ಈ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಬಂದಿರುವ ಮತ್ತು ಇತ್ಯರ್ಥಪಡಿಸಿರುವ ಅರ್ಜಿಗಳ ವಿವರಗಳನ್ನು ನೀಡುವುದು ?

## ಜೋಯಿಡಾ ತಾಲ್ಲೂಕಿನಲ್ಲಿ ಕ್ರೀಡಾ ಇಲಾಖೆಯಿಂದ ಬಿಡುಗಡೆಯಾದ ಅನುದಾನ ದುರ್ಬಳಕೆಯಾದ ಬಗ್ಗೆ

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೭೯೮ (೯೫೪) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾರಾವಾರ ಜಿಲ್ಲೆಯ ಜೋಯಿಡಾ ತಾಲ್ಲೂಕಿನಲ್ಲಿ ಕ್ರೀಡಾ ಇಲಾಖೆಯಿಂದ ಬಹಳಷ್ಟು ಅನುದಾನ ನೀಡಿ ಖರ್ಚು ಹಾಕಲಾಗಿದ್ದು, ಅದನ್ನು ಯಾವ ಯಾವ ಕಾಮಗಾರಿಗೆ ಹಾಕಲಾಗಿದೆ ; ಅದು ಅಲ್ಲಿ ಆಗದೇ ಬರಿ ಕಾಗದದಲ್ಲಿ ಮಾತ್ರ ಉಳಿದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ; (ವಿವರ ನೀಡುವುದು)

(ಅ) ೨೦೧೧–೧೨ ನೇ ಸಾಲಿನಲ್ಲಿ ಕ್ರೀಡಾಂಗಣ ನಿರ್ವಹಣೆ ಹೆಸರಿನಲ್ಲಿ ಬಂದಿರುವ ಅನುದಾನವೆಷ್ಟು ; ಅದನ್ನು ಯಾವ ಯಾವ ಕಾರಣಕ್ಕಾಗಿ ಬಳಸಿಕೊಳ್ಳಲಾಗಿದೆ ; ಈ ಕುರಿತು ಪ್ರತಿಯೊಂದು ಕೆಲಸ ಕಾರ್ಯಗಳನ್ನು ಮಾಡಿರುವ ಹಾಗೂ ಕ್ರೀಡಾಂಗಣಕ್ಕೆ ಪೀಠೋಪಕರಣ ಖರೀದಿ ಮಾಡಿದ ಕೊಟೇಶನ್ ಸಮೇತ ಖರೀದಿಸಿರುವ ವಿವರಗಳೊಂದಿಗೆ ಹಾಗೂ ಅದನ್ನು ಎಲ್ಲೆಲ್ಲಿ ಇಟ್ಟಿರುವ ಬಗ್ಗೆ ವರದಿ ನೀಡುವುದು ; (ಪೀಠೋಪಕರಣ ಸಹಿತ)

(ಇ) ೨೦೧೨–೧೩ ನೇ ಸಾಲಿನಲ್ಲಿ ಕ್ರೀಡಾಂಗಣ ನಿರ್ವಹಣೆ ಹೆಸರಿನಲ್ಲಿ ಬಂದಿರುವ ಅನುದಾನದ ವಿವರ ನೀಡುವುದು ಹಾಗೂ ಇದನ್ನು ಯಾವ ಯಾವ ಕೆಲಸ ಕಾರ್ಯಗಳಿಗೆ ಬಳಸಿಕೊಳ್ಳಲಾಗಿದೆ ; (ಈ ಕುರಿತಾದ ದಾಖಲೆಗಳೊಂದಿಗೆ ವಿವರ ನೀಡುವುದು)

(ಈ) ೨೦೧೩–೧೪ನೇ ಸಾಲಿನಲ್ಲಿ ಬಂದಿರುವ ಅನುದಾನ ಅದನ್ನು ಯಾವ ಕೆಲಸ ಕಾರ್ಯಗಳಿಗೆ ಬಳಸಿಕೊಳ್ಳಲಾಗಿದೆ ; (ಬಳಸಿಕೊಂಡಿರುವ ಕೆಲಸ ಕಾರ್ಯ ದಾಖಲೆಗಳ ವಿವರ ನೀಡುವುದು)

(ಉ) ಸದರಿ ಕ್ರೀಡಾಂಗಣಕ್ಕೆ ಇಟ್ಟಿರುವ ಕಾವಲುಗಾರರ ಸಂಖ್ಯೆ ; ಹಾಗೂ ಅವರಿಗೆ ನೀಡುತ್ತಿರುವ ವೇತನ ಎಷ್ಟು ? (ದಾಖಲೆಗಳೊಂದಿಗೆ ವಿವರ ನೀಡುವುದು)

## ಮಹಿಳಾ ಕ್ರೀಡಾಪಟುಗಳಿಗೆ ಜಿಲ್ಲಾ/ತಾಲ್ಲೂಕು ಮಟ್ಟದಲ್ಲಿ ಸೂಕ್ತ ವಸತಿ/ಅಭ್ಯಾಸದ ಸೌಕರ್ಯ ಬಗ್ಗೆ

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು):–**

೭೯೭ (೧೦೪೩) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ, ಮಹಿಳಾ ಕ್ರೀಡಾಪಟುಗಳು ಜಿಲ್ಲಾ/ ತಾಲ್ಲೂಕು ಮಟ್ಟದಲ್ಲಿ ಸೂಕ್ತ ವಸತಿ/ಅಭ್ಯಾಸದ ಸೌಕರ್ಯಗಳಿಲ್ಲದೆ, ಕ್ರೀಡಾರಂಗದಿಂದ ವಿಮುಖರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ರಾಜ್ಯದ ಎಷ್ಟು ಜಿಲ್ಲೆ/ತಾಲ್ಲೂಕು ಕೇಂದ್ರಗಳಲ್ಲಿ ಮಹಿಳಾ ಕ್ರೀಡಾಪಟುಗಳಿಗೆ ವಸತಿ/ಅಭ್ಯಾಸದ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ;

(ಇ) ರಾಜ್ಯದ ಉಳಿದ ಜಿಲ್ಲಾ/ತಾಲ್ಲೂಕು ಕೇಂದ್ರಗಳಲ್ಲಿ ಸೂಕ್ತ ವಸತಿ/ಅಭ್ಯಾಸದ ಸೌಲಭ್ಯಗಳನ್ನು ಕಲ್ಪಿಸಿ, ಮಹಿಳಾ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಲು ಸರ್ಕಾರ ರೂಪಿಸಿರುವ ಕಾರ್ಯಕ್ರಮಗಳೇನು ? (ಸಂಪೂರ್ಣ ವಿವರ ನೀಡುವುದು)

## ಅರಣ್ಯ ಸಂರಕ್ಷಣಾ ಕಾಯ್ದೆ ಉಲ್ಲಂಘನೆಯಿಂದ ಕಾನೂನು ಬಾಹಿರ ರಾಫ್ಟಿಂಗ್ ನಡೆಸುತ್ತಿರುವ ಬಗ್ಗೆ

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೭೯೮ (೯೩೪) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾರಾವಾರ ಜಿಲ್ಲೆಯ ದಾಂಡೇಲಿಯ ಅಭಯಾರಣ್ಯದಲ್ಲಿ ಅರಣ್ಯ ಸಂರಕ್ಷಣಾ ಕಾನೂನಿನಡಿ ಕಾಯ್ದಿಟ್ಟ ಅರಣ್ಯ ಪ್ರದೇಶದಲ್ಲಿ ಯಾವುದೇ ಚಟುವಟಿಕೆ ನಡೆಸುವಂತಿಲ್ಲದಿದ್ದರೂ, ಸಮೀಪದ ಕುಸುಡಿ ಅರಣ್ಯ ಪ್ರದೇಶದಿಂದ ಆವೃತ್ತವಾದ ಕಾಳಿ ನದಿಯಲ್ಲಿ ಅರಣ್ಯ ಇಲಾಖೆಯೂ ತನ್ನ ಅಧಿಕಾರಿ

ವ್ಯಾಪ್ತಿ ಮೀರಿ ನೀಡುವ ಲೈಸೆನ್ಸ್ ಇಟ್ಟುಕೊಂಡು ಜಂಗಲ್ ಲಾಡ್ಜ್‌ನವರು ಕಳೆದ ೧೫ ವರ್ಷಗಳಿಂದ ಕಾನೂನು ಬಾಹಿರವಾಗಿ ರಾಫ್ಟಿಂಗ್ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ ; (ವಿವರ ನೀಡುವುದು) ಸದರಿ ರಾಫ್ಟಿಂಗ್ ಕಾರ್ಯ ನಡೆಸಲು ಬೇರೆ ಇಲಾಖೆ ಹೊರತುಪಡಿಸಿ ನೇರವಾಗಿ ಅರಣ್ಯ ಇಲಾಖೆಯವರೆ ಎಲ್ಲಾ ಪ್ರಕ್ರಿಯೆಯನ್ನು ಮಾಡುತ್ತಿರುವುದರಿಂದ, ಪೂರ್ತಿ ಅಧಿಕಾರ ಇಲಾಖೆಗೆ ಇದೆಯೇ ; (ವಿವರ ನೀಡುವುದು)

(ಆ) ರಾಜ್ಯದ ಯಾವ ಯಾವ ಜಿಲ್ಲೆಯ ಯಾವ ಯಾವ ಭಾಗದಲ್ಲಿ ರಾಫ್ಟಿಂಗ್ ನಡೆಸುತ್ತಿದ್ದಾರೆ ; (ಜಿಲ್ಲಾವಾರು ವಿವರ ನೀಡುವುದು) ಇದಕ್ಕೆ ಇರುವ ಮಾನದಂಡವೇನು ; ಸದರಿ ಪ್ರದೇಶದಲ್ಲಿ ರಾಫ್ಟಿಂಗ್ ನಡೆಸಲು ಯಾವ ಇಲಾಖೆಯಿಂದ ಯಾವ ಯಾವ ದಾಖಲಾತಿ ಪಡೆದುಕೊಂಡು ಅನುಮತಿ ನೀಡಲಾಗಿದೆ ? (ಈ ಕುರಿತು ಜಿಲ್ಲಾವಾರು ವಿವರ ನೀಡುವುದು)

## ಹಳಿಯಾಳ ತಾಲ್ಲೂಕಿನ ಕೆಸರೊಳ್ಳಿ ಗ್ರಾಮದಲ್ಲಿ ಎಸ್.ಸಿ/ಎಸ್.ಟಿ. ಗೆ ಸಂಬಂಧಿಸಿದ ಜಮೀನು ಕೆಲವೊಂದು ಜನರು ಅತಿಕ್ರಮಣ ಮಾಡಿಕೊಂಡಿರುವ ಬಗ್ಗೆ

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೭೯ (೯೫೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಳಿಯಾಳ ತಾಲ್ಲೂಕಿನ ಕೆಸರೊಳ್ಳಿ ಗ್ರಾಮದಲ್ಲಿ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದವರಿಗೆ ಸೇರಿದ ಬಹಳಷ್ಟು ಜಮೀನುಗಳನ್ನು (ಅದು ಈ ಹಿಂದೆ ಸಕ್ಕರೆ ಕಾರ್ಖಾನೆಗೆ ಸ್ಥಾಪಿಸಲು ಉದ್ದೇಶಿಸಿದ ಸ್ಥಳ) ಪಟ್ಟಭದ್ರ ಹಿತಾಸಕ್ತಿಗಳು ಅತಿಕ್ರಮಣ ಮಾಡಿ ಯಾವುದೇ ದಾಖಲಾತಿ ಇಲ್ಲದೇ ಬೇಕಾದ ಸವಲತ್ತುಗಳನ್ನು ಮಾಡಿಕೊಂಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ವಿವರ ನೀಡುವುದು ;

(ಆ) ಈಗಾಗಲೇ ಸದರಿ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ಜನರಿಗೆ ಸೇರಿದ ಸ್ಥಳವನ್ನು ಅನಧಿಕೃತವಾಗಿ ಆಕ್ರಮಿಸಿ ಅಲ್ಲಿ ವಿದ್ಯುತ್, ಬೋರ್‌ವೆಲ್ ಕಟ್ಟಡದ ಪರವಾನಿಗೆ ಮುಂತಾದ ಸವಲತ್ತುಗಳನ್ನು ಯಾರ ಅನುಮತಿ ಮೇರೆಗೆ ಪಡೆದುಕೊಂಡಿರುತ್ತಾರೆ. ಇದಕ್ಕೆ ಅವಕಾಶವಿದೆಯೇ ? (ವಿವರ ನೀಡುವುದು

## ಜೋಯಿಡಾ ತಾಲ್ಲೂಕಿನಲ್ಲಿ, ಕ್ರೀಡಾ ಇಲಾಖೆಯಲ್ಲಿ ಆಗಿರುವ ಅವ್ಯವಹಾರದ ಬಗ್ಗೆ

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೮೦೦ (೯೩೬) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾರವಾರ ಜಿಲ್ಲೆಯ ಜೋಯಿಡಾ ತಾಲ್ಲೂಕಿಗೆ ಕ್ರೀಡಾ ಇಲಾಖೆಯಿಂದ ೨೦೧೧–೧೨ ನೇ ಸಾಲಿನಿಂದ ೨೦೧೫–೧೬ ನೇ ಸಾಲಿನವರೆಗೆ ಬಂದಿರುವ ಅನುದಾನ ಎಷ್ಟು ; (ವಿವರ ನೀಡುವುದು)

(ಆ) ಕ್ರೀಡಾಂಗಣ ನಿರ್ವಹಣೆ ಹೆಸರಿನಲ್ಲಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿದ್ದು, ಇದರಲ್ಲಿ ಪೂರ್ತಿ ಅವ್ಯವಹಾರ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ ; (ವಿವರ ನೀಡುವುದು)

(ಇ) ಸದರಿ ಕ್ರೀಡಾಂಗಣ ನಿರ್ವಹಣೆ ಹೆಸರಿನಲ್ಲಿ ಪೀಠೋಪಕರಣ ಖರೀದಿ ಮಾಡಿರುತ್ತಾರೆಂದು ತಿಳಿಸಿ ಎಲ್ಲಿಯೂ ಯಾವುದೇ ಪೀಠೋಪಕರಣ ಕಂಡು ಬರದೇ ಇರುವುದರಿಂದ ಖರೀದಿಸಿದ ಪೀಠೋಪಕರಣ ಹಾಗೂ ಎಲ್ಲೆಲ್ಲಿ ಅಳವಡಿಸಲಾಗಿದೆ ಎನ್ನುವ ಮಾಹಿತಿಯೊಂದಿಗೆ ವಿವರ ವರದಿ ನೀಡುವುದು ;

(ಈ) ಸದರಿ ಕಾಮಗಾರಿ ಅವ್ಯವಹಾರದಲ್ಲಿ ಬಹಳಷ್ಟು ಮಂದಿ ಅಧಿಕಾರಿಗಳು ಶಾಮೀಲಾಗಿದ್ದು, ಈ ಕುರಿತು ಸಂಬಂಧಿಸಿದವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ ? (ವಿವರ ನೀಡುವುದು)

## ಭದ್ರಾ ಮೇಲ್ದಂಡೆ ಯೋಜನೆ ಬಗ್ಗೆ

**ಶ್ರೀಮತಿ ಜಯಮ್ಮ (ವಿಧಾನಸಭೆಯಿಂದ ಚುನಾಯಿತರಾದವರು):–**

೮೦೧ (೯೬೨) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಭದ್ರಾ ಮೇಲ್ದಂಡೆ ಯೋಜನೆ ಮುಖಾಂತರ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ಹಾಗೂ ಚಳ್ಳಕೆರೆ ತಾಲ್ಲೂಕಿನ ಕೆರೆಗಳಿಗೆ ನೀರು ತುಂಬಿಸುವ ಕಾರ್ಯ ಯಾವ ಹಂತದಲ್ಲಿದೆ ;

(ಆ) ಮೊಳಕಾಲ್ಮೂರು ಹಾಗೂ ಚಳ್ಳಕೆರೆ ಮುಖ್ಯ ಕಾಲುವೆಗಳ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ;

(ಇ) ಸದರಿ ಕಾಲುವೆಗಳ ಸರ್ವೆ ಕಾರ್ಯ ಯಾವ ಹಂತದಲ್ಲಿದೆ ?

## ರಾಜ್ಯದಲ್ಲಿ ತಲೆದೋರಿರುವ ಬರ ಪರಿಸ್ಥಿತಿ ನಿರ್ವಹಣೆಗೆ ತೆಗೆದುಕೊಂಡಿರುವ ಕ್ರಮ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) –**

೮೦೨ (೯೨೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಎಷ್ಟು ತಾಲ್ಲೂಕುಗಳನ್ನು ಬರ ಪೀಡಿತ ಪ್ರದೇಶವೆಂದು ಘೋಷಿಸಲಾಗಿದೆ ;

(ಆ) ಈ ಬರ ಪೀಡಿತ ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ, ಜಾನುವಾರುಗಳ ಮೇವಿನ ಸಮಸ್ಯೆಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ;

(ಇ) ಪ್ರತಿ ತಾಲ್ಲೂಕಿಗೆ ಬರ ಪರಿಹಾರದ ಕಾಮಗಾರಿಗಳಿಗಾಗಿ ಈವರೆಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ; (ತಾಲ್ಲೂಕುವಾರು ವಿವರ ನೀಡುವುದು)

(ಈ) ಬರ ಪರಿಹಾರದ ಕಾಮಗಾರಿಗಳಿಗಾಗಿ ಕೇಂದ್ರ ಸರ್ಕಾರಕ್ಕೆ ಎಷ್ಟು ; ಹಣಕ್ಕಾಗಿ ಬೇಡಿಕೆ ಸಲ್ಲಿಸಲಾಗಿದೆ ಮತ್ತು ಅಲ್ಲಿಂದ ಬಿಡುಗಡೆಯಾದ ಹಣವೆಷ್ಟು ; ಸರ್ಕಾರದಿಂದ ಮಾಡಲಾದ ವೆಚ್ಚವೆಷ್ಟು ? (ಜಿಲ್ಲಾವಾರು ವಿವರ ನೀಡುವುದು)

## ವರಾಹಿ ಯೋಜನೆಯ ಅನುಷ್ಠಾನದ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) –**

೮೦೩ (೯೨೪) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉಡುಪಿ ಜಿಲ್ಲೆಯ ವರಾಹಿ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಯಿತು ; ಪ್ರಾರಂಭ ಮಾಡುವ ಸಂದರ್ಭದಲ್ಲಿ ಯೋಜನೆಯ ಉದ್ದೇಶಗಳೇನಾಗಿದ್ದವು ;

(ಆ) ಈ ಯೋಜನೆ ಪೂರ್ಣವಾಗಿ ಅನುಷ್ಠಾನಗೊಂಡಿದೆಯೇ ; ಇಲ್ಲದಿದ್ದಲ್ಲಿ ಯೋಜನೆಯ ಅನುಷ್ಠಾನಕ್ಕೆ ಅಡ್ಡಿಯುಂಟಾಗಲು ಹಾಗೂ ಅತಿಯಾದ ವಿಳಂಬಕ್ಕೆ ಕಾರಣಗಳೇನು ;

(ಇ) ಈ ಯೋಜನೆಯ ಪ್ರಾರಂಭದ ಅಂದಾಜು ವೆಚ್ಚ ಎಷ್ಟು ; ಈವರೆಗೆ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ ; ಈ ಯೋಜನೆಯನ್ನು ಪೂರ್ಣಗೊಳಿಸಲು ಅವಶ್ಯವಿರುವ ಮೊಬಲಗು ಎಷ್ಟು ;

(ಈ) ಈಗಾಗಲೇ ಸಾಕಷ್ಟು ವೆಚ್ಚವಾಗಿರುವುದರಿಂದ, ಈ ಯೋಜನೆಯನ್ನು ಪರಿವರ್ತಿಸಿ, ಉಡುಪಿ ಜಿಲ್ಲೆಯ/ಉಡುಪಿ ನಗರದ ಕುಡಿಯುವ ನೀರಿಗಾಗಿ ಈ ಯೋಜನೆಯನ್ನು ಪರಿವರ್ತಿಸುವ ಕುರಿತಾಗಿ ಸರ್ಕಾರ ಚಿಂತನೆ ನಡೆಸಿದೆಯೇ ?

## ರಾಜ್ಯ ಅರಣ್ಯ ಇಲಾಖೆಯ ಅಧೀನದಲ್ಲಿರುವ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) –**

೮೦೪ (೯೨೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಅರಣ್ಯ ಇಲಾಖೆಯ ಅಧೀನದಲ್ಲಿರುವ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಲಭ್ಯವಿರುವ ತಾಣಗಳ ವಿವರ ನೀಡುವುದು ;

(ಆ) ಅರಣ್ಯ ಇಲಾಖೆ ಮತ್ತು ಪ್ರವಾಸೋದ್ಯಮ ಇಲಾಖೆ, ಪ್ರವಾಸೋದ್ಯಮವನ್ನು ಬೆಳೆಸುವ ನಿಟ್ಟಿನಲ್ಲಿ ಕೈಗೆತ್ತಿಕೊಂಡಿರುವ ಯೋಜನೆಗಳ ವಿವರ ನೀಡುವುದು ;

(ಇ) ಈ ರೀತಿಯಾಗಿ ಯೋಜನೆಗಳನ್ನು ಕೈಗೆತ್ತಿಕೊಂಡಿರುವಾಗ ಮೂಲಭೂತ ಸೌಲಭ್ಯಗಳ ಕೊರತೆ ಹಾಗೂ ಕೆಳಮಟ್ಟದ ಕಳಪೆಮಟ್ಟದ ಕಾಮಗಾರಿಯಿಂದಾಗಿ ಪ್ರವಾಸಿಗರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಪ್ರವಾಸೋದ್ಯಮ ಒಂದು ಉದ್ಯಮವಾಗಿ ಅತ್ಯಂತ ಕಡಿಮೆ ಸಮಯದಲ್ಲಿ ಅತಿ ಹೆಚ್ಚು ಆದಾಯ ಹಾಗೂ ಸರ್ಕಾರದ ಮೇಲೆ ಒತ್ತಡವಿಲ್ಲದೆ ಉದ್ಯಮ ಸೃಷ್ಠಿಸಬಲ್ಲ ಚಟುವಟಿಕೆಯಾಗಿರುವುದರಿಂದ ಮತ್ತು ನಿರಂತರವಾಗಿ ಬೆಳೆಯಲು ಎಲ್ಲಾ ಸಾಧ್ಯತೆಗಳು ಇರುವುದರಿಂದ, ಈ ಕುರಿತಾಗಿ ಸರ್ಕಾರ ಯೋಚಿಸಿದೆಯೇ ? (ವಿವರ ನೀಡುವುದು)

## ರಾಜ್ಯ ಅರಣ್ಯ ಇಲಾಖೆಯಲ್ಲಿ ಅಧಿಕೃತವಾಗಿ ಸೃಷ್ಠಿಯಾಗಿರುವ ಐ.ಎಫ್.ಎಸ್. ಅಧಿಕಾರಿಗಳ ಹುದ್ದೆ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) –**

೮೦೫ (೯೨೫) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಅರಣ್ಯ ಇಲಾಖೆಯಲ್ಲಿ ಅಧಿಕೃತವಾಗಿ ಸೃಷ್ಠಿಯಾಗಿರುವ ಐ.ಎಫ್.ಎಸ್. ಅಧಿಕಾರಿಗಳ ಹುದ್ದೆಗಳೆಷ್ಟು ;

(ಆ) ರಾಜ್ಯದಲ್ಲಿ ನೇಮಕಗೊಂಡ ಐ.ಎಫ್.ಎಸ್ ಅಧಿಕಾರಿಗಳ ಸಂಖ್ಯೆ ಎಷ್ಟು ; (ನೇರ ಮತ್ತು ಮುಂಬಡ್ತಿ ಮೂಲಕ)

(ಇ) ಈ ಐ.ಎಫ್.ಎಸ್ ಅಧಿಕಾರಿಗಳಲ್ಲಿ ಅರಣ್ಯ ಇಲಾಖೆ ಹೊರತುಪಡಿಸಿ ರಾಜ್ಯದ ಬೇರೆ ಬೇರೆ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು ;

(ಈ) ಐ.ಎಫ್.ಎಸ್ ಅಧಿಕಾರಿಗಳನ್ನು ಇಲಾಖೆಯೇತರ ಚಟುವಟಿಕೆಗಳಲ್ಲಿ ತೊಡಗಿಸಿರುವುದರಿಂದ, ರಾಜ್ಯದ ಅರಣ್ಯ ಇಲಾಖೆಯಲ್ಲಿ ಅಗತ್ಯ ಕೆಲಸಗಳು ಕುಂಠಿತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಇಲಾಖೆಯ ಒಟ್ಟು ಅಧಿಕಾರಿಗಳಲ್ಲಿ ಎಷ್ಟು ಅಧಿಕಾರಿಗಳು ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ?

## ಧಾರ್ಮಿಕ ದತ್ತಿ ಇಲಾಖೆಯ ದೇವಸ್ಥಾನಗಳಲ್ಲಿ ಗೋಶಾಲೆ ಪ್ರಾರಂಭಿಸುವಲ್ಲಿ ವಿಳಂಬ ನೀತಿ ಅನುಸರಿಸುತ್ತಿರುವ ಕುರಿತು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೮೦೬ (೯೪೪) ಮಾನ್ಯ ಜವಳಿ ಹಾಗೂ ಮುಜರಾಯಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಈ ಹಿಂದೆ ರಾಜ್ಯ ಧಾರ್ಮಿಕ ಪರಿಷತ್ತಿನ ಸಭೆಯಲ್ಲಿ, ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ದೇವಾಲಯಗಳಲ್ಲಿ ಗೋಶಾಲೆ ತೆರೆಯುವ ನಿರ್ಣಯ ಕೈಗೊಳ್ಳಲಾಗಿದೆಯೇ ;

(ಆ) ನಿರ್ಣಯದ ಕುರಿತು ಕೈಗೊಂಡ ಕ್ರಮಗಳೇನು ;

(ಇ) ರಾಜ್ಯದ ಯಾವ ಯಾವ ದೇವಸ್ಥಾನಗಳಲ್ಲಿ ಗೋಶಾಲೆ ತೆರೆಯುವ ಕುರಿತು ಉದ್ದೇಶಿಸಲಾಗಿದೆ ; (ವಿವರ ನೀಡುವುದು)

(ಈ) ಯಾವ ಜಿಲ್ಲೆಯ ಯಾವ ದೇವಸ್ಥಾನಗಳಲ್ಲಿ ಗೋಶಾಲೆ ತೆರೆಯಲಾಗಿದೆ ;

(ಉ) ಗೋಶಾಲೆ ತೆರೆಯುವ ಯೋಜನೆ ಅನುಷ್ಠಾನದ ವಿಳಂಬಕ್ಕೆ ಕಾರಣಗಳೇನು ;

(ಊ) ಈಗಾಗಲೇ ನಿರ್ಣಯ ಕೈಗೊಂಡಂತೆ ದೇವಸ್ಥಾನಗಳಲ್ಲಿ ಗೋಶಾಲೆ ಪ್ರಾರಂಭಿಸುವ ಯೋಜನೆಯನ್ನು ಶೀಘ್ರವಾಗಿ ಅನುಷ್ಠಾನಗೊಳ್ಳುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ? (ವಿವರ ನೀಡುವುದು)

## ಮತ್ಸ್ಯಾಶ್ರಯ ಯೋಜನೆಗಳ ಅನುಷ್ಠಾನದಲ್ಲಿ ವಿಳಂಬ ಆಗುತ್ತಿರುವ ಕುರಿತು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೮೦೭ (೯೪೩) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೪ ವರ್ಷಗಳಲ್ಲಿ ಮಂಜೂರಾದ "ಮತ್ಸ್ಯಾಶ್ರಯ" ಮೀನುಗಾರಿಕಾ ಮನೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು, ವರ್ಷವಾರು ವಿವರ ನೀಡುವುದು)

(ಆ) ಗುರಿಗೆ ತಕ್ಕಂತೆ ಆಯ್ಕೆಯಾದ ಫಲಾನುಭವಿಗಳ ಸಂಖ್ಯೆ ಎಷ್ಟು ;

(ಇ) ಮನೆ ಮಂಜೂರಾದ ಫಲಾನುಭವಿಗಳಲ್ಲಿ ಮುಕ್ತಾಯವಾದ, ಪ್ರಗತಿಯಲ್ಲಿರುವ ಹಾಗೂ ಪ್ರಾರಂಭಿಸದಿರುವ ಮನೆಗಳ ಸಂಖ್ಯೆ ಎಷ್ಟು ;

(ಈ) ಮಂಜೂರಾದ ಮನೆ ಪ್ರಾರಂಭಿಸುವಲ್ಲಿ ಹಾಗೂ ಪ್ರಾರಂಭವಾದ ಮನೆಗಳ ನಿರ್ಮಾಣವನ್ನು ಮುಕ್ತಾಯಗೊಳಿಸುವಲ್ಲಿ, ವಿಳಂಬವಾಗುತ್ತಿರುವುದನ್ನು ಗಮನಿಸಲಾಗಿದೆಯೇ ;

(ಉ) ಅನುಷ್ಠಾನದ ಜವಾಬ್ದಾರಿಯನ್ನು ಗ್ರಾಮ ಪಂಚಾಯತ್‌ಗಳಿಗೆ ನೀಡುವ ಬಗ್ಗೆ ಸರ್ಕಾರದ ನಿಲುವೇನು ; ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ; (ವಿವರ ಒದಗಿಸುವುದು)

(ಊ) ಕರಾವಳಿಯ ಮೀನುಗಾರ ವಸತಿರಹಿತರಿಗೆ ಮನೆ ನೀಡುವ ಬಗ್ಗೆ, ಮತ್ಸ್ಯಾಶ್ರಯ, ಮನೆಗಳ ಗುರಿ ಹೆಚ್ಚಳ ಹಾಗೂ ಹಂತವಾರು ಜಿ.ಪಿ.ಎಸ್ ನಿಂದ ವಿನಾಯಿತಿ ನೀಡಿ, ಒಂದೇ ಬಾರಿ ಎಲ್ಲಾ ಹಂತದ ಜಿ.ಪಿ.ಎಸ್ ಪ್ರಗತಿ ದಾಖಲಿಸುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ? (ಸಂಪೂರ್ಣ ವಿವರ ಒದಗಿಸುವುದು)

## ಗ್ರಾಮ ಪಂಚಾಯತಿಗಳಿಗೆ ಅಗತ್ಯ ನಿವೇಶನಗಳನ್ನು ಒದಗಿಸುವಲ್ಲಿ ವಿಳಂಬದ ಕುರಿತು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೮೦೮ (೯೪೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಘನ ತ್ಯಾಜ್ಯ ವಿಲೇವಾರಿ ಘಟಕ ಸ್ಮಶಾನ ಮತ್ತು ವಸತಿ ನಿವೇಶನ, ಕಛೇರಿ ಕಟ್ಟಡದಂತಹ ಸಾರ್ವಜನಿಕ ಉದ್ದೇಶಗಳಿಗೆ ಭೂಮಿಗಾಗಿ ಗ್ರಾಮ ಪಂಚಾಯತ್‌ಗಳಿಂದ ಪ್ರಸ್ತಾವನೆ ಸ್ವೀಕರಿಸಲಾಗಿದೆ ; (ಜಿಲ್ಲಾವಾರು, ತಾಲ್ಲೂಕುವಾರು ವಿವರ ಒದಗಿಸುವುದು ಹಾಗೂ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಪ್ರತ್ಯೇಕ ವಿವರ ಒದಗಿಸುವುದು)

(ಆ) ಯಾವ ಯಾವ ಗ್ರಾಮ ಪಂಚಾಯತ್‌ಗಳಿಗೆ ಒಟ್ಟು ಎಷ್ಟು ಭೂಮಿಯನ್ನು ಸದರಿ ಉದ್ದೇಶಕ್ಕಾಗಿ ಹಸ್ತಾಂತರಿಸಲಾಗಿದೆ ; (ವಿವರ ಒದಗಿಸುವುದು)

(ಇ) ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಸರ್ಕಾರಿ ಭೂಮಿ ಲಭ್ಯವಿದ್ದಾಗ್ಯೂ ಗ್ರಾಮ ಪಂಚಾಯತ್‌ಗಳು ಸಾರ್ವಜನಿಕ ಉದ್ದೇಶಗಳಿಗೆ ನಿವೇಶನ ಕೋರಿ ಬೇಡಿಕೆ ಸಲ್ಲಿಸಿದಾಗ, ತ್ವರಿತ ಹಸ್ತಾಂತರಕ್ಕೆ ಇರುವ ತೊಡಕುಗಳೇನು ; ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ? (ವಿವರ ಒದಗಿಸುವುದು)

## ಕಂದಾಯ ಇಲಾಖೆಯ ಸಾಮಾಜಿಕ ಭದ್ರತಾ ಯೋಜನೆಗಳ ಅನುಷ್ಠಾನದಲ್ಲಿನ ಲೋಪ–ದೋಷಗಳ ಕುರಿತು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೮೯ (೯೪೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಂದಾಯ ಇಲಾಖೆಯ ಮೂಲಕ ಅನುಷ್ಠಾನಗೊಳ್ಳುತ್ತಿರುವ ಸಾಮಾಜಿಕ ಭದ್ರತಾ ಯೋಜನೆಗಳಾವುವು ; ಸದರಿ ಯೋಜನೆಗಳ ಫಲಾನುಭವಿಗಳಿಗೆ ಬೇಕಾಗುವ ಅರ್ಹತೆಗಳೇನು ;

(ಆ) ಕಳೆದ ೩ ವರ್ಷಗಳಲ್ಲಿ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳನ್ನು ಕೋರಿ ಸಲ್ಲಿಕೆಯಾದ ಅರ್ಜಿಗಳೆಷ್ಟು ; ಅವುಗಳಲ್ಲಿ ವಿಲೇವಾರಿಯಾದ, ಆಯ್ಕೆಯಾದ, ವಿಲೇವಾರಿಗೆ ಬಾಕಿಯಿರುವ ಅರ್ಜಿಗಳೆಷ್ಟು ; (ಯೋಜನೆವಾರು, ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು)

(ಇ) ಕಂದಾಯ ಇಲಾಖೆಯಲ್ಲಿ ವಿವಿಧ ಮಾಶಾಸನ, ಪಿಂಚಣಿ ಸೇರಿದಂತೆ ವಿವಿಧ ಪ್ರಯೋಜನ ಪಡೆಯಲು ಅರ್ಜಿ ಸಲ್ಲಿಸುವ ಬಡವರ, ದುರ್ಬಲರ, ಅಬಲೆಯರ ಅರ್ಜಿಗಳನ್ನು ವಿಳಂಬವಾಗಿ ವಿಲೇವಾರಿಯಾಗುತ್ತಿರುವುದು, ವಿನಾಕಾರಣ ಅರ್ಜಿಗಳನ್ನು ವಿಲೇ ಮಾಡದೇ ಬಾಕಿಯಿಡುವುದು, ಕಂದಾಯ ಇಲಾಖೆಯಲ್ಲಿ ಮಧ್ಯವರ್ತಿಗಳ ಹಾವಳಿ, ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಈ) ಕಂದಾಯ ಇಲಾಖೆಯ ಮೂಲಕ ಅನುಷ್ಠಾನಗೊಳ್ಳುತ್ತಿರುವ ಪ್ರತಿಯೊಂದು ಸಾಮಾಜಿಕ ಭದ್ರತಾ ಯೋಜನೆಗಳು, ಪ್ರತಿಯೊಬ್ಬ ಅರ್ಹ ಬಡ ಹಾಗೂ ಕಟ್ಟಕಡೆಯ ವ್ಯಕ್ತಿಗೆ ಸಿಗುವಂತೆ ಮಾಡಲು ಸರ್ಕಾರದ ಯೋಜನೆ ಮತ್ತು ಯೋಚನೆಗಳೇನು ? (ಸಂಪೂರ್ಣ ವಿವರ ನೀಡುವುದು)

## ೯೪–ಸಿ ಮತ್ತು ೯೪–ಸಿಸಿ ಯೋಜನೆಯಡಿ ಹಕ್ಕು ಪತ್ರ ನೀಡುವಲ್ಲಿ ವಿಳಂಬವಾಗುತ್ತಿರುವ ಕುರಿತು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೮೧೦ (೯೪೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೯೪–ಸಿ ಮತ್ತು ೯೪–ಸಿಸಿ ಕಾಯ್ದೆಯಂತೆ ಸ್ವೀಕೃತವಾದ ಅರ್ಜಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು)

(ಆ) ೯೪–ಸಿ ಮತ್ತು ೯೪–ಸಿಸಿ ಕಾಯ್ದೆಯಡಿ ವಿತರಿಸಲಾದ ಹಕ್ಕು ಪತ್ರಗಳ ಸಂಖ್ಯೆ ಎಷ್ಟು ; ತಿರಸ್ಕರಿಸಲಾದ ಅರ್ಜಿಗಳ ಸಂಖ್ಯೆ ಎಷ್ಟು ;

(ಇ) ೯೪–ಸಿ ಮತ್ತು ೯೪–ಸಿಸಿ ಯಡಿ ಭೂಮಿ/ನಿವೇಶನ ಹಕ್ಕು ಪತ್ರ ನೀಡಲು ನಿಗದಿಪಡಿಸಿದ ಶುಲ್ಕ ಎಷ್ಟು ; (ಆದೇಶ ಪ್ರತಿ ಒದಗಿಸುವುದು)

(ಈ) ನಿವೇಶನದ ಶುಲ್ಕ ಕಡಿಮೆಗೊಳಿಸುವುದಾಗ ಸರ್ಕಾರ ಘೋಷಿಸಿದ್ದರೂ, ಆದೇಶ ಹೊರಡಿಸದೇ ಇರುವುದು ನಿಜವೇ ; ಯಾವಾಗ ಹೊಸ ಆದೇಶ ಹೊರಡಿಸಲಾಗುವುದು ;

(ಉ) ೯೪–ಸಿ ಮತ್ತು ೯೪–ಸಿಸಿ ಯೋಜನೆಯಡಿ ಅರ್ಜಿ ವಿಲೇವಾರಿ ವಿಳಂಬವಾಗುತ್ತಿದ್ದು, ಸಕಾರಣವಿಲ್ಲದೆ ಸಾವಿರಾರು ಅರ್ಜಿ ತಿರಸ್ಕರಿಸಿರುವುದು ಯೋಜನೆ ಆಶಯಕ್ಕೆ ಧಕ್ಕೆಯಾಗಿರುವುದರ ಕುರಿತು ಹಾಗೂ ಬಡ ನಿವೇಶನ ರಹಿತರಿಗೆ ಶೀಘ್ರವಾಗಿ ಹಕ್ಕುಪತ್ರ ನೀಡುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ; (ಸಂಪೂರ್ಣ ವಿವರ ಒದಗಿಸುವುದು)

(ಊ) ೯೪–ಸಿ ಮತ್ತು ೯೪–ಸಿಸಿ ಯೋಜನೆಯಡಿ ನೀಡಲಾಗುವ ಭೂಮಿ ಎಷ್ಟು ; ೯೪–ಸಿಸಿ ಯೋಜನೆಯಡಿ ಪ್ರಸಕ್ತ ನೀಡಲು ಉದ್ದೇಶಿಸಿರುವ ಭೂಮಿಯ ಅಳತೆಯಲ್ಲಿ ಹೆಚ್ಚಳ ಮಾಡಲಾಗುವುದೇ ; ಈ ಬಗ್ಗೆ ಸರ್ಕಾರದ ನಿಲುವೇನು ? (ವಿವರ ಒದಗಿಸುವುದು)

## ಬಳ್ಳಾರಿ ಜಿಲ್ಲೆಯ ಮುಜರಾಯಿ ದೇವಸ್ಥಾನಗಳ ಬಗ್ಗೆ

**ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೮೧೧ (೯೬೭) ಮಾನ್ಯ ಜವಳಿ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮುಜರಾಯಿ ಇಲಾಖೆಯಿಂದ ಕಳೆದ ಮೂರು ವರ್ಷಗಳಲ್ಲಿ ವಿವಿಧ ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಬಿಡುಗಡೆ ಮಾಡಿರುವ ಹಣವೆಷ್ಟು ;

(ಆ) ಈ ರೀತಿ ಬಿಡುಗಡೆಯಾಗಿರುವ ಹಣದಲ್ಲಿ ಬಳ್ಳಾರಿ ಜಿಲ್ಲೆಯ ಯಾವ ಯಾವ ದೇವಸ್ಥಾನಗಳಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ;

(ಇ) ಬಳ್ಳಾರಿ ಜಿಲ್ಲೆಯ ದೇವಸ್ಥಾನಗಳ ಮೂಲ ಸೌಲಭ್ಯಗಳ ಅಭಿವೃದ್ಧಿಗೆ ಕೈಗೊಂಡಿರುವ ಕ್ರಮಗಳೇನು ?

## ‘ರಾಷ್ಟ್ರೀಯ ಕುಟುಂಬ ನೆರವು’ ಯೋಜನೆಯಡಿ ಅರ್ಹ ಫಲಾನುಭವಿಗಳಿಗೆ ಸಹಾಯಧನ ಸಿಗದಿರುವ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೮೧೨ (೧೦೩೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಡತನ ರೇಖೆಗಿಂತ ಕೆಳಗಿರುವವರಿಗೆ ಸಾಮಾಜಿಕ ಭದ್ರತೆಗಾಗಿ ರಾಷ್ಟ್ರೀಯ ಕುಟುಂಬ ನೆರವು ಯೋಜನೆಯಡಿ ಅರ್ಜಿ ಸಲ್ಲಿಸಿದ ಅರ್ಹ ಫಲಾನುಭವಿಗಳಿಗೆ ಸಹಾಯಧನ ಬಿಡುಗಡೆ ಮಾಡುವಲ್ಲಿ, ವಿಳಂಬವಾಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಬೆಳಗಾವಿ ಜಿಲ್ಲೆಯಲ್ಲಿ ೨೦೧೩ ರಿಂದ ೨೦೧೬ರ ಆಗಸ್ಟ್‌ರವರೆಗೆ ಎಷ್ಟು ಜನ ಫಲಾನುಭವಿಗಳು ಅರ್ಜಿ ಸಲ್ಲಿಸಿರುತ್ತಾರೆ ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಇದರಲ್ಲಿ ಎಷ್ಟು ಜನ ಫಲಾನುಭವಿಗಳಿಗೆ ಸಹಾಯಧನ ಬಿಡುಗಡೆ ಮಾಡಲಾಗಿದೆ ; (ವರ್ಷಾವಾರು, ತಾಲ್ಲೂಕುವಾರು ವಿವರ ನೀಡುವುದು)

(ಈ) ಬಾಕಿ ಇರುವ ಫಲಾನುಭವಿಗಳಿಗೆ ಯಾವ ಕಾಲಮಿತಿಯಲ್ಲಿ ಸಹಾಯಧನ ಬಿಡುಗಡೆ ಮಾಡಲಾಗುವುದು ?

## ಅಂತ್ಯ ಸಂಸ್ಕಾರದ ಸಹಾಯಧನವು ಫಲಾನುಭವಿಗಳಿಗೆ ತಲುಪದೇ ಇರುವ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೮೧೩ (೧೦೩೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರದ ಅಂತ್ಯ ಸಂಸ್ಕಾರ ಸಹಾಯಧನ ಯೋಜನೆಯು ರಾಜ್ಯದಲ್ಲಿ ಅರ್ಜಿ ಸಲ್ಲಿಸಿರುವ ಬಡತನ ರೇಖೆಗಿಂತ ಕೆಳಗಿರುವ ಫಲಾನುಭವಿಗಳಿಗೆ ನಿಗದಿತ ಅವಧಿಯಲ್ಲಿ ಸಹಾಯಧನ ತಲುಪದೆ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ೨೦೧೪ ರಿಂದ ೨೦೧೬ರ ಆಗಸ್ಟ್‌ರವರೆಗೆ ಬೆಳಗಾವಿ ಜಿಲ್ಲೆಯಲ್ಲಿ ಅರ್ಜಿ ಸಲ್ಲಿಸಿದ ಫಲಾನುಭವಿಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಸಹಾಯಧನ ನೀಡುವಲ್ಲಿ ಆಗಿರುವ ವಿಳಂಬಕ್ಕೆ ಕಾರಣಗಳೇನು ;

(ಈ) ಈಗಾಗಲೇ ಸಹಾಯಧನ ಪಡೆದುಕೊಂಡಿರುವ ಫಲಾನುಭವಿಗಳು ಎಷ್ಟು ; ಬಾಕಿ ಇರುವ ಫಲಾನುಭವಿಗಳ ಸಂಖ್ಯೆ ಎಷ್ಟು ; (ವರ್ಷಾವಾರು, ತಾಲ್ಲೂಕುವಾರು ವಿವರ ನೀಡುವುದು)

(ಉ) ಬಾಕಿ ಇರುವ ಫಲಾನುಭವಿಗಳಿಗೆ ಯಾವ ಕಾಲಮಿತಿಯಲ್ಲಿ ಸಹಾಯಧನ ಬಿಡುಗಡೆ ಮಾಡಲಾಗುವುದು ?

## ಅನುಸೂಚಿತ ಬುಡಕಟ್ಟುಗಳು ಹಾಗೂ ಪಾರಂಪರಿಕ ಅರಣ್ಯವಾಸಿಗಳಿಗೆ ಪುನರ್ವಸತಿ ಕಲ್ಪಿಸುವ ಯೋಜನೆ ವಿಫಲವಾಗಿರುವ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೮೧೪ (೧೦೩೩) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅನುಸೂಚಿತ ಬುಡಕಟ್ಟುಗಳು ಹಾಗೂ ಇತರೆ ಪಾರಂಪರಿಕ ಅರಣ್ಯವಾಸಿಗಳ ಅಧಿನಿಯಮ–೨೦೦೬ರಡಿ ಜಾರಿಗೆ ಬಂದಂತೆ, ಅರಣ್ಯವಾಸಿಗಳಿಗೆ ಅಲ್ಲೇ ಪುನರ್ವಸತಿ ಹಕ್ಕು ಕಲ್ಪಿಸುವ ಯೋಜನೆ ವಿಫಲವಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ರಾಜ್ಯದಲ್ಲಿ ಈ ಯೋಜನೆಯಡಿ ಹಕ್ಕುಪತ್ರ ಬಯಸಿ ಪರಿಶಿಷ್ಟ ವರ್ಗ ಹಾಗೂ ಇತರೆ ಪಾರಂಪರಿಕ ಅರಣ್ಯವಾಸಿಗಳು ಸಲ್ಲಿಸಿದ ಒಟ್ಟು ಅರ್ಜಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಇ) ಅದರಲ್ಲಿ ತಿರಸ್ಕರಿಸಲ್ಪಟ್ಟ ಅರ್ಜಿಗಳು ಎಷ್ಟು ; ಅರ್ಜಿಗಳನ್ನು ತಿರಸ್ಕರಿಸಲು ಕಾರಣಗಳೇನು ; (ಜಿಲ್ಲಾವಾರು ವಿವರ ನೀಡುವುದು)

(ಈ) ಇತ್ಯರ್ಥಕ್ಕೆ ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಉ) ಈಗಾಗಲೇ ಎಷ್ಟು ಜನ ಅರಣ್ಯವಾಸಿಗಳಿಗೆ ಅಲ್ಲೇ ಪುನರ್ವಸತಿ ಹಕ್ಕು ಕಲ್ಪಿಸುವ ಅರಣ್ಯ ಹಕ್ಕನ್ನು ಕಲ್ಪಿಸಲಾಗಿದೆ ? (ವಿವರ ನೀಡುವುದು)

## ಬೆಳಗಾವಿ ಜಿಲ್ಲೆಯಲ್ಲಿ ಬಗರ್‌ಹುಕುಂ ಸಮಿತಿಯ ಕಾರ್ಯವ್ಯಾಪ್ತಿಯ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೮೧೫ (೧೦೩೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ಜಿಲ್ಲೆಯಲ್ಲಿ ಬಗರ್‌ಹುಕುಂ ಸಮಿತಿಗಳನ್ನು ರಚಿಸಲಾಗಿದೆಯೇ ; ಹಾಗಿದ್ದಲ್ಲಿ, ಜಿಲ್ಲೆಯ ಬಗರ್‌ಹುಕುಂ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರುಗಳು ಯಾರ್‍ಯಾರು ;

(ಆ) ಬಗರ್‌ಹುಕುಂ ಸಮಿತಿಗಳ ಕಾರ್ಯವ್ಯಾಪ್ತಿಯ ಇತಿಮಿತಿಗಳೇನು ; ಇವರು ಜಮೀನು ಮಂಜೂರು ಮಾಡಲು ಸರ್ಕಾರ ರೂಪಿಸಿರುವ ನಿಯಮಗಳೇನು ; ರೈತರಿಗೆ ವಿಧಿಸಿರುವ ಷರತ್ತುಗಳೇನು ; ಹಾಗೂ ಅರ್ಹತೆಗಳೇನು ; (ಸರ್ಕಾರಿ ಆದೇಶಗಳೊಂದಿಗೆ ವಿವರವಾಗಿ ಮಾಹಿತಿ ನೀಡುವುದು)

(ಇ) ಸದರಿ ಸಮಿತಿಗಳಿಂದ ಸಾಗುವಳಿ ಚೀಟಿ ಪಡೆಯಲು ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಜನ ರೈತರು ಅರ್ಜಿಗಳನ್ನು ಸಲ್ಲಿಸಿರುತ್ತಾರೆ ; ಇತ್ಯರ್ಥವಾದ ಹಾಗೂ ಬಾಕಿ ಉಳಿದ ಅರ್ಜಿಗಳೆಷ್ಟು ; ಬಾಕಿ ಉಳಿದ ರೈತರ ಸಾಗುವಳಿ ಅರ್ಜಿಗಳನ್ನು ಯಾವ ಕಾಲಮಿತಿಯೊಳಗೆ ಇತ್ಯರ್ಥಗೊಳಿಸಲಾಗುವುದು ? (ತಾಲ್ಲೂಕುವಾರು ವಿವರ ನೀಡುವುದು)

## ಅರಣ್ಯ ಇಲಾಖೆಯಲ್ಲಿ ನಡೆದಿರುವ ಕಾಮಗಾರಿಗಳ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೮೧೬ (೯೪೮) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅರಣ್ಯ ಇಲಾಖೆಯ ಕಾಮಗಾರಿಗಳು ಸಮರ್ಪಕವಾಗಿ ನಡೆಯದೇ ಇರುವುದರಿಂದ ಗ್ರಾಮೀಣ ಪ್ರದೇಶಗಳು ಅರಣ್ಯೀಕರಣದಂತಹ ಮಹತ್ವದ ಯೋಜನೆಗಳಿಂದ ವಂಚಿತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ೨೦೧೪–೧೫, ೨೦೧೫–೧೬ ಹಾಗೂ ೨೦೧೬–೧೭ನೇ ಸಾಲಿಗೆ ಅರಣ್ಯ ಇಲಾಖೆಗೆ ನಿಗದಿಪಡಿಸಿದ, ಹಂಚಿಕೆಯಾದ ಹಾಗೂ ೨೦೧೬ರ ಸೆಪ್ಟೆಂಬರ್ ಅಂತ್ಯದವರೆಗೆ ಬಿಡುಗಡೆಯಾದ ಅನುದಾನದ ವರ್ಷವಾರು ವಿವರಗಳನ್ನು ನೀಡುವುದು ;

(ಇ) ಮೇಲ್ಕಂಡ ಅವಧಿಯಲ್ಲಿ ೨೦೧೬ರ ಸೆಪ್ಟೆಂಬರ್ ಅಂತ್ಯದವರೆಗೆ ಸಾಮಾಜಿಕ ಅರಣ್ಯ ಮತ್ತು ಪ್ರಾದೇಶಿಕ ಅರಣ್ಯ ವ್ಯಾಪ್ತಿಯ ವಿವಿಧ ಲೆಕ್ಕ ಶೀರ್ಷಿಕೆಗಳಡಿ ಜಿಲ್ಲಾವಾರು, ತಾಲ್ಲೂಕುವಾರು ಹಂಚಿಕೆಯಾದ ಅನುದಾನ ಜಿಲ್ಲಾವಾರು, ತಾಲ್ಲೂಕುವಾರು ಕೈಗೊಳ್ಳಲಾದ ಕಾಮಗಾರಿಗಳು, ಈ ಕಾಮಗಾರಿಗಳಿಗೆ ಮಾಡಲಾದ ವೆಚ್ಚದ ಜಿಲ್ಲಾವಾರು, ತಾಲ್ಲೂಕುವಾರು ವಿವರ ಹಾಗೂ ವಿವಿಧ ಯೋಜನೆಗಳಿಗೆ ಮಾಡಲಾದ ವೆಚ್ಚದ ತಾಲ್ಲೂಕುವಾರು ಸಮಗ್ರ ವಿವರಗಳನ್ನು ಕೊಡುವುದು ?

## ಸವಿತಾ ಸಮಾಜಕ್ಕೆ ಜಮೀನು ಮಂಜೂರು ಮಾಡುವ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೮೧೭ (೯೪೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕು ಸವಿತಾ ಸಮಾಜ, ತಾಲ್ಲೂಕಿನ ಗೂರನಹಳ್ಳಿ, ಕಸಬಾ ಹೋಬಳಿ ವ್ಯಾಪ್ತಿಯಲ್ಲಿ ಸಮುದಾಯ ಭವನ ನಿರ್ಮಿಸಲು ಜಮೀನು ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿರುವುದು ಸರ್ಕಾರದ ಗಮನದಲ್ಲಿದೆಯೇ ;

(ಆ) ಸದರಿ ಸಮುದಾಯ ಭವನ ನಿರ್ಮಾಣದ ಉದ್ದೇಶಕ್ಕಾಗಿ ಚನ್ನರಾಯಪಟ್ಟಣ ತಾಲ್ಲೂಕು, ಕಸಬಾ ಹೋಬಳಿ ಗೂರನಹಳ್ಳಿಯ ಸರ್ವೆ ನಂ. ೯೫ರಲ್ಲಿ ೦.೦೯ ಗುಂಟೆ ಜಮೀನು ಮಂಜೂರಾತಿಗೆ ಹಾಸನ ಜಿಲ್ಲಾಧಿಕಾರಿಯವರು ದಿನಾಂಕ ೨೯.೦೪.೨೦೧೪ರಂದು ಸಲ್ಲಿಸಿರುವ ಮರು ಪ್ರಸ್ತಾವನೆ ಯಾವ ಹಂತದಲ್ಲಿದೆ ; (ವಿವರ ನೀಡುವುದು)

(ಇ) ಜಿಲ್ಲಾಧಿಕಾರಿಗಳು ಸವಿತಾ ಸಮಾಜಕ್ಕೆ ಜಮೀನು ಮಂಜೂರಾತಿ ಮಾಡುವ ಕುರಿತು ಸರ್ಕಾರಕ್ಕೆ ಸಲ್ಲಿಸಿದ ಮರು ಪ್ರಸ್ತಾವನೆ ವಿವರದ ಪತ್ರ ಮತ್ತು ಅನಂತರ ಈ ಕುರಿತು ಕ್ರಮಕ್ಕಾಗಿ ನಡೆದ ಪತ್ರ ವ್ಯವಹಾರಗಳ ವಿವರಗಳನ್ನು ನೀಡುವುದು ?

## ಅಂತ್ಯ ಸಂಸ್ಕಾರ ಪರಿಹಾರ ನಿಧಿ ಬಿಡುಗಡೆ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೮೧೮ (೯೪೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗಾಗಿರುವ (ಬಿಪಿಎಲ್) ಅಂತ್ಯ ಸಂಸ್ಕಾರ ಪರಿಹಾರ ನಿಧಿ ಯೋಜನೆ ಸಮರ್ಪಕವಾಗಿ ಜಾರಿಯಾಗದೇ ಬಹುತೇಕ ಕುಟುಂಬಗಳು ಪರಿಹಾರ ನಿಧಿಗಾಗಿ ಕಂದಾಯ ಇಲಾಖೆ ಕಛೇರಿಗಳಿಗೆ ಅಲೆದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸದರಿ ಯೋಜನೆಯಡಿ ನೀಡಲಾಗುವ ಪರಿಹಾರ ಮೊತ್ತ ಎಷ್ಟು ; ೨೦೧೪–೧೫, ೨೦೧೫–೧೬ ಹಾಗೂ ೨೦೧೬–೧೭ನೇ ಸಾಲಿಗೆ ನಿಗದಿಪಡಿಸಿದ, ಹಂಚಿಕೆಯಾದ ಮತ್ತು ಬಿಡುಗಡೆಯಾದ ಜಿಲ್ಲಾವಾರು ತಾಲ್ಲೂಕುವಾರು, ಅನುದಾನವೆಷ್ಟು ;

(ಇ) ೨೦೧೪–೧೫ ರಿಂದ ೨೦೧೬ರವರೆಗೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ (ಇಲ್ಲಿಯವರೆಗೆ) ಬಿಪಿಎಲ್ ಕುಟುಂಬಗಳಿಗೆ ಹಂಚಲಾದ ಪರಿಹಾರ ಮೊತ್ತದ ಜಿಲ್ಲಾವಾರು, ತಾಲ್ಲೂಕುವಾರು, ಫಲಾನುಭವಿವಾರು ವಿವರಗಳನ್ನು ಸಮಗ್ರವಾಗಿ ನೀಡುವುದು ?

## ಕಂದಾಯ ಇಲಾಖೆ ಸಕಾಲದ ಸೇವೆಗಳ ಅಡಿಯಲ್ಲಿ ಇಲಾಖಾವಾರು ಬಂದಿರುವ ಅರ್ಜಿಗಳ ಬಗ್ಗೆ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು):–**

೮೧೯ (೧೦೬೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೬–೧೭ನೇ ಸಾಲಿನಲ್ಲಿ ಕಂದಾಯ ಇಲಾಖೆ ಸಕಾಲದ ಸೇವೆಗಳ ಅಡಿಯಲ್ಲಿ ಇಲಾಖಾವಾರು ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ;

(ಆ) ಕೆಲವು ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಅರ್ಜಿ ಸ್ವೀಕರಿಸಿ ಹಲವಾರು ತಿಂಗಳಾದರೂ ವಿಲೇವಾರಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆಯೇ ;

(ಈ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಕಾಲ ಸೇವೆಗಳ ಅಡಿಯಲ್ಲಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ; (ಇಲಾಖಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

(ಉ) ಈ ಅರ್ಜಿಗಳಲ್ಲಿ ವಿಲೇವಾರಿ ಆಗಿರುವ ಸಂಖ್ಯೆ ಎಷ್ಟು ; ಉಳಿದಿರುವ ಅರ್ಜಿಗಳೆಷ್ಟು ?

## ITI ಹಾಗೂ ಡಿಪ್ಲೋಮಾ ಅಭ್ಯರ್ಥಿಗಳನ್ನು ಗುತ್ತಿಗೆ ಆಧಾರದಲ್ಲಿ ದುಡಿಸಿಕೊಳ್ಳುತ್ತಿರುವ ಕುರಿತು

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೮೨೦ (೯೦೮) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಾವಿರಾರು ಜನರಿಗೆ ಉದ್ಯೋಗ ಕಲ್ಪಿಸುವುದಾಗಿ ಹೇಳಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಭೂಮಿ ಪಡೆಯುವ ಕಂಪನಿಗಳು ರಾಜ್ಯದ ಹಲವಾರು ಐ.ಟಿ.ಐ ಹಾಗೂ ಡಿಪ್ಲೋಮಾ ಅಭ್ಯರ್ಥಿಗಳನ್ನು "ಟ್ರೈನೀಸ್" ಗಳೆಂದು ವರ್ಷಾನುಗಟ್ಟಲೆ ಗುತ್ತಿಗೆ ಆಧಾರದಲ್ಲಿ ದುಡಿಸಿಕೊಳ್ಳಲಾಗುತ್ತಿದೆ ; ಮತ್ತು ಅವರ ಪರಿಶ್ರಮಕ್ಕೆ ತಕ್ಕಂತೆ ವೇತನ ಸೌಲಭ್ಯಗಳನ್ನು ನೀಡದೆ ಅವಧಿ ಮುಗಿದ ಮೇಲೆ ಅವರನ್ನು ಕೈಬಿಡಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇದರ ವಿರುದ್ಧ ಏನೇನು ಕ್ರಮಗಳನ್ನು ಕೈಗೊಳ್ಳಲಾಗಿದೆ ;

(ಆ) ಇಂತಹ ITI ಹಾಗೂ ಡಿಪ್ಲೋಮಾ ಅಭ್ಯರ್ಥಿಗಳಿಗೆ ಖಾಯಂ ಉದ್ಯೋಗ ಕಲ್ಪಿಸುವ ನಿಟ್ಟಿನಲ್ಲಿ, ಕಾರ್ಮಿಕ ಕಾನೂನುಗಳಲ್ಲಿ ತಿದ್ದುಪಡಿ ತರಲು ಸಾಧ್ಯವೇ ?

## ಬೆಂಗಳೂರು ಜಿಲ್ಲಾ ವ್ಯಾಪ್ತಿಯಲ್ಲಿ ಮುಜರಾಯಿ ಇಲಾಖೆಗೆ ಒಳಪಡುವ ದೇವಸ್ಥಾನಗಳ ಕುರಿತು

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೮೨೧ (೯೦೭) ಮಾನ್ಯ ಜವಳಿ ಹಾಗೂ ಮುಜರಾಯಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಜಿಲ್ಲಾ ವ್ಯಾಪ್ತಿಯಲ್ಲಿ ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ದೇವಸ್ಥಾನಗಳು ಎಷ್ಟು ; (ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಕಳೆದ ೩ ವರ್ಷಗಳಲ್ಲಿ ಬಿಡುಗಡೆಯಾಗಿರುವ ಅನುದಾನವೆಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಬೆಂಗಳೂರು ಜಿಲ್ಲಾ ವ್ಯಾಪ್ತಿಯಿಂದ ಮುಜರಾಯಿ ಇಲಾಖೆಗೆ ಒಳಪಡಿಸಲು ಇಲ್ಲಿಯವರೆಗೂ ಎಷ್ಟು ದೇವಸ್ಥಾನಗಳಿಂದ ಅರ್ಜಿಗಳು ಬಂದಿವೆ ? (ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು)

## ರಾಜ್ಯದ ಅರಣ್ಯ ಪ್ರದೇಶದಲ್ಲಿರುವ ಕಳ್ಳಬೇಟೆ ತಡೆ ಶಿಬಿರ

**ಶ್ರೀ ಕೆ.ವಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು):–**

೮೨೨ (೯೫೭) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಅರಣ್ಯ ಪ್ರದೇಶದಲ್ಲಿರುವ ಕಳ್ಳಬೇಟೆ ತಡೆ ಶಿಬಿರಗಳ (Anti-poaching Camp) ಸಂಖ್ಯೆ ಎಷ್ಟು ; (ಸ್ಥಳಗಳ ಜಿಲ್ಲಾವಾರು ವಿವರ ನೀಡುವುದು)

(ಆ) ಈ ಕ್ಯಾಂಪ್‌ಗಳಲ್ಲಿ ಇರುವ ನೌಕರರಿಗೆ ಕೊಟ್ಟಿರುವ ಸೌಲಭ್ಯಗಳೇನು ;

(ಇ) ಈ ಕ್ಯಾಂಪ್‌ಗಳಲ್ಲಿ ನೌಕರರಿಗೆ ಕನಿಷ್ಠ ಮೂಲಭೂತ ಸೌಕರ್ಯ ಕೊಟ್ಟಿಲ್ಲದಿರುವುದು ನಿಜವೇ ;

(ಈ) ಹಾಗಿದ್ದಲ್ಲಿ, ಇವರಿಗೆ ಕನಿಷ್ಠ ಮೂಲಭೂತ ಸೌಕರ್ಯ ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ನೋಂದಾಯಿತ ಸಂಘಗಳ ತನಿಖೆ ಬಗ್ಗೆ ನೇಮಿಸಿದ್ದ ಸದನ ಸಮಿತಿಯ ವರದಿ ಬಗ್ಗೆ

**ಶ್ರೀ ಕೆ.ವಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು):–**

೮೨೩ (೯೧೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ ಪ್ರಕಾರ Karnataka Society Registration Act ನೋಂದಾಯಿಸಿರುವ ಅನೇಕ ಸಂಘಗಳ (ಕ್ಲಬ್) ಕಾರ್ಯವೈಖರಿ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸಲು ನೇಮಿಸಿದ ಸದನ ಸಮಿತಿಯು ವರದಿ ಸಲ್ಲಿಸಿದೆಯೇ ;

(ಆ) ಸಲ್ಲಿಸಿದ್ದಲ್ಲಿ, ಅದರ ಪ್ರತಿಯನ್ನು ನೀಡುವುದು ; ವರದಿ ಸಲ್ಲಿಸಿಲ್ಲದ ಪಕ್ಷದಲ್ಲಿ, ವಿಳಂಬವಾಗುತ್ತಿರುವುದಕ್ಕೆ ಕಾರಣಗಳನ್ನು ತಿಳಿಸುವುದು ;

(ಇ) ಈ ವಿಳಂಬಗಳಿಂದ ಕ್ಲಬ್‌ಗಳಲ್ಲಿ ಸದಸ್ಯತ್ವ ಪಡೆಯಲು ಇಚ್ಛಿಸುವ ಶಾಸಕರುಗಳು ಅವಕಾಶ ವಂಚಿತರಾಗುವುದಿಲ್ಲವೇ ;

(ಈ) ಈ ಬಗ್ಗೆ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ ?

**ಶಾಸಕರ ಸಾಂವಿಧಾನಿಕ ಸಂಘ ಸ್ಥಾಪನೆಗೆ ಭೂ ಮಂಜೂರಾತಿ ಬಗ್ಗೆ**

**ಶ್ರೀ ಕೆ.ವಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು):–**

೮೨೪ (೯೩೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದಲ್ಲಿ ಶಾಸಕರುಗಳಿಗಾಗಿ ಸಾಂವಿಧಾನಿಕ ಸಂಘ (Constitutional club) ಸ್ಥಾಪಿಸಲು ಸರ್ಕಾರ ಜಾಗ ಮಂಜೂರು ಮಾಡಿದೆಯೇ ; ಮಾಡಿದ್ದಲ್ಲಿ, ಎಲ್ಲಿ ; (ವಿವರ ನೀಡುವುದು)

(ಆ) ಜಾಗ ಮಂಜೂರು ಮಾಡದಿದ್ದಲ್ಲಿ, ಎಂಟು ವರ್ಷಕ್ಕೂ ಮಿಗಿಲಾಗಿ ಸದಸ್ಯತ್ವ ಪಡೆದಿರುವ ಶಾಸಕರುಗಳಿಗೆ ಅನಾನುಕೂಲಗಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಆದಷ್ಟು ಶೀಘ್ರ ಸ್ಥಳ ಮಂಜೂರು ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ ?

## ಹುಲಿ ಮತ್ತು ಆನೆಗಳ ಸಂತತಿಯ ರಕ್ಷಣೆಗಾಗಿ ಸರ್ಕಾರ ಕೈಗೊಂಡ ಕ್ರಮ

**ಶ್ರೀ ಕೆ.ವಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು):–**

೮೨೫ (೯೧೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕವು ಹುಲಿ ಮತ್ತು ಆನೆಗಳ ಸಂಖ್ಯೆಯಲ್ಲಿ ರಾಷ್ಟ್ರದಲ್ಲಿಯೇ ಪ್ರಥಮ ಸ್ಥಾನದಲ್ಲಿರುವುದು ನಿಜವೇ ;

(ಆ) ಹಾಗಿದ್ದಲ್ಲಿ, ಈ ಹುಲಿ ಮತ್ತು ಆನೆಗಳ ಸಂತತಿಯ ಸಂರಕ್ಷಣೆಗಾಗಿ ಸರ್ಕಾರವು ಕೈಗೊಂಡಿರುವ ಕ್ರಮಗಳೇನು ;

(ಇ) ಹುಲಿ ಮತ್ತು ಆನೆಗಳ ಸಂತತಿಯ ಸಂರಕ್ಷಣೆಗೆ ಏನಾದರೂ ಅಡಚಣೆಗಳು ಇವೆಯೇ ;

(ಈ) ಇದ್ದಲ್ಲಿ, ಅವುಗಳನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಅರಣ್ಯ ಇಲಾಖೆಯ ವನ್ಯಜೀವಿ ವಿಭಾಗದ ತಕ್ಷೀರು ಪ್ರಕರಣ ಮತ್ತು ಕೋವಿ ಪರವಾನಿಗೆ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೮೨೬ (೯೩೫) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ವನ್ಯಜೀವಿ ವಿಭಾಗದಲ್ಲಿ ಕಳೆದ ಮೂರು ವರ್ಷದಲ್ಲಿ ದಾಖಲಾದ ತಕ್ಷೀರುಗಳ ಸಂಖ್ಯೆ ಎಷ್ಟು ; (ವರ್ಷಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ವನ್ಯಜೀವಿ ವಿಭಾಗದಲ್ಲಿ ತಕ್ಷೀರು ಪ್ರಕರಣಗಳು ಗಣನೀಯ ಇಳಿಮುಖವಾಗಿದ್ದರೂ ರೈತರ ಬೆಳೆರಕ್ಷಣೆಗೆ ಕೋವಿ ಪರವಾನಿಗೆ ನೀಡಲು ವಿಳಂಬ ಮಾಡಲು ಮತ್ತು ನಿರಾಕರಿಸಲು ಕಾರಣವೇನು ;

(ಇ) ಕೋವಿ ಪರವಾನಿಗೆಗೆ ತಮ್ಮ ಇಲಾಖೆಯಿಂದ ಶಿಫಾರಸ್ಸು ನಿರಾಕರಿಸಲು ಇರುವ ಮಾನದಂಡ ಯಾವುದು ; ಕಳೆದ ೨ ವರ್ಷಗಳಲ್ಲಿ ಕೋವಿ ಪರವಾನಿಗೆ ಕೋರಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು ; ನಿರಾಕರಿಸಿದ ಮತ್ತು ಮಂಜೂರಾತಿ ನೀಡಿದ ಪ್ರಕರಣಗಳೆಷ್ಟು ? (ತಾಲ್ಲೂಕುವಾರು ಮಾಹಿತಿ ನೀಡುವುದು)

## ಉಡುಪಿ ಜಿಲ್ಲೆಯ ಭೂ ಮಂಜೂರಾತಿ ಸಮಿತಿಗಳ ಸಭೆಯ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೮೨೭ (೯೩೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರಸಕ್ತ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಉಡುಪಿ ಜಿಲ್ಲೆಯ ೫ ವಿಧಾನಸಭಾ ಕ್ಷೇತ್ರಗಳಲ್ಲಿ ಅಕ್ರಮ ಸಕ್ರಮದಡಿಯಲ್ಲಿ ನಡೆದ ಸಭೆಗಳ ಸಂಖ್ಯೆ ಎಷ್ಟು ; (ದಿನಾಂಕ, ತಿಂಗಳು, ವರ್ಷವಾರು ಮಾಹಿತಿಯನ್ನು ನೀಡುವುದು) ಈ ಸಭೆಯಲ್ಲಿ ಮಂಜೂರಾತಿ ನೀಡಿದ, ತಿರಸ್ಕೃತ ಮಾಡಿದ ಮತ್ತು ಮುಂದೂಡಿದ ಅರ್ಜಿಗಳ ಸಂಖ್ಯೆ ಎಷ್ಟು ; (ದಿನಾಂಕ, ತಿಂಗಳು, ವರ್ಷವಾರು ಮಾಹಿತಿಯನ್ನು ನೀಡುವುದು)

(ಆ) ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಉಡುಪಿ ಜಿಲ್ಲೆಯ ; ೩ ತಾಲ್ಲೂಕುಗಳ ಭೂ ನ್ಯಾಯ ಮಂಡಳಿಯ ಸಭೆಗಳ ಸಂಖ್ಯೆ ಎಷ್ಟು ; (ದಿನಾಂಕ, ತಿಂಗಳು, ವರ್ಷವಾರು ಮಾಹಿತಿಯನ್ನು ನೀಡುವುದು) ಈ ಸಭೆಯಲ್ಲಿ ಇತ್ಯರ್ಥಪಡಿಸಿದ ಪ್ರಕರಣ ಸಂಖ್ಯೆ ಎಷ್ಟು ; (ದಿನಾಂಕ, ತಿಂಗಳು, ವರ್ಷವಾರು ಮಾಹಿತಿ ನೀಡುವುದು)

(ಇ) ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಉಡುಪಿ ಜಿಲ್ಲೆಯಲ್ಲಿ ೭ಎ ಅನ್ವಯ ನಡೆದ ಸಮಿತಿಯ ಸಭೆಗಳ ಸಂಖ್ಯೆ ಎಷ್ಟು ; (ದಿನಾಂಕ, ತಿಂಗಳು,

ವರ್ಷವಾರು ಮಾಹಿತಿಯನ್ನು ನೀಡುವುದು) ಈ ಸಭೆಯಲ್ಲಿ ಇತ್ಯರ್ಥಪಡಿಸಿದ ಪ್ರಕರಣ ಸಂಖ್ಯೆ ಎಷ್ಟು ? (ದಿನಾಂಕ, ತಿಂಗಳು, ವರ್ಷವಾರು ಮಾಹಿತಿ ನೀಡುವುದು)

## ಅರಣ್ಯ ಭೂಮಿಯ ಪಹಣಿ ದಾಖಲೀಕರಣ ಮತ್ತು ಫಾರೆಸ್ಟ್ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೮೨೮ (೯೩೨) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಸುರಕ್ಷಿತ ಅರಣ್ಯ ಪ್ರದೇಶ ಮತ್ತು ಶಾಸನಬದ್ಧ ಅರಣ್ಯ ಪ್ರದೇಶದ ವಿಸ್ತೀರ್ಣವೆಷ್ಟು ; ಅವುಗಳಲ್ಲಿ ಪಹಣಿಯಲ್ಲಿ ದಾಖಲಾದ ಮತ್ತು ಪಹಣಿಯಲ್ಲಿ ದಾಖಲಾತಿಗೆ ಬಾಕಿಯಿರುವ ಪ್ರಮಾಣವೆಷ್ಟು ; ಪಹಣಿಯಲ್ಲಿ ದಾಖಲಾತಿ ದಾಖಲಾಗದೇ ಮಾಡಲು ಇರುವ ಕಾಲಮಿತಿ ಯಾವುವು ; (ಜಿಲ್ಲಾವಾರು, ಹೆಕ್ಟೇರ್‌ವಾರು ಮಾಹಿತಿ ನೀಡುವುದು)

(ಆ) ಪಹಣಿಯಲ್ಲಿ ಅರಣ್ಯ ಭೂಮಿ ದಾಖಲಾಗದೇ ಇರುವುದರಿಂದ ಅಕ್ರಮ ಸಕ್ರಮ ಭೂ ಮಂಜೂರಾತಿಯಲ್ಲಿ ರೈತರಿಗೆ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ತುರ್ತು ಆರ್‌ಟಿಸಿಯಲ್ಲಿ ದಾಖಲಿ ಕ್ರಮಕ್ಕೆ ಸರ್ಕಾರದ ಕ್ರಮವೇನು ;

(ಇ) ಡೀಮ್ಡ್ ಫಾರೆಸ್ಟ್ ಅನಿಶ್ಚಿತತೆಯಿಂದ ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಬಗ್ಗೆ ಸರ್ಕಾರದ ತುರ್ತು ಕ್ರಮವೇನು ;

(ಈ) ಗ್ರಾಮ ಪಂಚಾಯತಿಯಿಂದ ಬೆಳೆಸಲಾದ ನೆಡು ತೋಪುಗಳನ್ನು ಅರಣ್ಯ ಇಲಾಖೆ ತನ್ನ ದಾಖಲೆಯಲ್ಲಿ ಅಳವಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಗ್ರಾಮ ಪಂಚಾಯತಿಗೆ ಪುನಃ ಹಸ್ತಾಂತರಿಸಿದ ಪ್ರಕರಣಗಳೆಷ್ಟು ? (ಜಿಲ್ಲಾವಾರು ಮಾಹಿತಿ ಒದಗಿಸುವುದು)

## ಗ್ರಾಮೀಣ ಪ್ರದೇಶದಲ್ಲಿ ಫಾರ್ಮ್‌ಹೌಸ್ ರಚನೆಯ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೨೯ (೯೩೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರೈತರು ತಮ್ಮ ಕೃಷಿ ಭೂಮಿಯಲ್ಲಿ ಕೃಷಿ ಮನೆ (ಫಾರ್ಮ್‌ಹೌಸ್) ನಿರ್ಮಿಸಲು ಪರವಾನಿಗೆಯನ್ನು ಪಡೆಯಬೇಕಾದ ಪ್ರಾಧಿಕಾರ ಯಾವುದು; ಮತ್ತು ಪರವಾನಿಗೆ ಪಡೆಯಲು ಸರ್ಕಾರದಿಂದ ನಿಗಧಿಪಡಿಸಲಾದ ಮಾರ್ಗಸೂಚಿ ಮತ್ತು ದಾಖಲೆಗಳ ಬಗ್ಗೆ ಮಾಹಿತಿಯನ್ನು ಒದಗಿಸುವುದು;

(ಆ) ಈ ಫಾರ್ಮ್‌ಹೌಸ್‌ಗಳಿಗೆ ಗ್ರಾಮ ಪಂಚಾಯತಿಗಳು ಕಟ್ಟಡ ಸಂಖ್ಯೆ ಮತ್ತು ವಿದ್ಯುತ್ ನಿರಾಕ್ಷೇಪಣ ಪತ್ರ ನೀಡಲು ಕೈಗೊಳ್ಳಬೇಕಾದ ಮಾರ್ಗಸೂಚಿ ಆದೇಶಗಳು ಯಾವುವು;

(ಇ) ಗ್ರಾಮೀಣ ಭಾಗದಲ್ಲಿ ಫಾರ್ಮ್‌ಹೌಸ್ ನಿರ್ಮಾಣಕ್ಕೆ ಇರುವ ತೊಂದರೆಯು ಸರ್ಕಾರದ ಗಮನಕ್ಕೆ ಬಂದಿದೆಯೇ; ಹೌದಾದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು?

## ಬರ ಪೀಡಿತ ಪ್ರದೇಶಗಳ ಕುರಿತು

**ಶ್ರೀ ಎಂ.ಕೆ. ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೩೦ (೯೫೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಈ ಬಾರಿ ಬರ ಪೀಡಿತ ಪ್ರದೇಶಗಳೆಂದು ಘೋಷಿಸಿರುವ ತಾಲ್ಲೂಕುಗಳು ಯಾವುವು;

(ಆ) ಸದರಿ ಬರ ಪೀಡಿತ ತಾಲ್ಲೂಕುಗಳಿಗೆ ಬಿಡುಗಡೆ ಮಾಡಿದ ಬೆಳೆ ಪರಿಹಾರಧನವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಕೇಂದ್ರದಿಂದ ರಾಜ್ಯಕ್ಕೆ ಬಂದಿರುವ ಬೆಳೆ ಪರಿಹಾರವೆಷ್ಟು; ಇದರಲ್ಲಿ ಚಿಕ್ಕಮಗಳೂರು ಜಿಲ್ಲೆಗೆ ಬಿಡುಗಡೆ ಮಾಡಿರುವ ಪರಿಹಾರದಲ್ಲಿ ಕೇಂದ್ರದ ಮತ್ತು ರಾಜ್ಯದ ಪಾಲೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಚಿಕ್ಕಮಗಳೂರು ಜಿಲ್ಲಾದ್ಯಂತ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ ಎಷ್ಟು; ಸದರಿ ರೈತರ ಕುಟುಂಬಕ್ಕೆ ಒದಗಿಸಿರುವ ಪರಿಹಾರ ಧನವೆಷ್ಟು? (ರೈತರ ವಿಳಾಸದೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು)

## ನೀರಾವರಿ ಇಲಾಖೆಯ ಅನುದಾನ ಕುರಿತು

**ಶ್ರೀ ಎಂ.ಕೆ. ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೩೧ (೯೫೦) ಮಾನ್ಯ ಭಾರಿ ಮತ್ತು ಮಾಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಲ್ಲಿ ನೀರಾವರಿ ಇಲಾಖೆಗೆ ಪ್ರತಿ ವರ್ಷ ೧೦ ಸಾವಿರ ಕೋಟಿ ರೂಪಾಯಿಗಳಂತೆ ಸುಮಾರು ೩೦ ಸಾವಿರ ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿದ್ದರೂ, ರಾಜ್ಯದಲ್ಲಿ ಕುಡಿಯುವ ನೀರಿಗೆ ಮತ್ತು ಕೃಷಿ ಚಟುವಟಿಕೆಗಳಿಗೆ ಸರಿಯಾಗಿ ನೀರು ಸರಬರಾಜು ಆಗದೇ ರಾಜ್ಯಾದ್ಯಂತ ತೊಂದರೆಯಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಕಳೆದ ೩ ವರ್ಷಗಳಲ್ಲಿ ಕೈಗೊಂಡ ಯೋಜನೆಗಳು ಯಾವುವು; ಯಾವ ಯೋಜನೆಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಕೈಗೊಂಡ ಯೋಜನೆಗಳು ಯಾವ ಯಾವ ಹಂತದಲ್ಲಿವೆ; ಪ್ರಗತಿಯಲ್ಲಿ ಇರುವ ಕಾಮಗಾರಿಗಳು ಎಷ್ಟು; ಯಶ್ವಸಿಯಾಗಿ ಪೂರ್ಣಗೊಂಡ ಕಾಮಗಾರಿಗಳು ಎಷ್ಟು; (ಕಾಮಗಾರಿಗಳವಾರು, ಸಂಪೂರ್ಣ ಮಾಹಿತಿ ನೀಡುವುದು)

(ಈ) ಕಳೆದ ೩ ವರ್ಷಗಳಲ್ಲಿ ಕೈಗೊಂಡ ಯೋಜನೆಗಳಿಗೆ ಯಾವ ರೀತಿ ನೀಲಿ ನಕ್ಷೆ, ಅಂದಾಜು ಪಟ್ಟಿ ತಯಾರಿಸಲಾಗಿತ್ತು; ಒಂದು ಯೋಜನೆಯ ಕಾಮಗಾರಿಗಳಿಗೆ ನಿಗಧಿಪಡಿದ್ದ ಕಾಲಮಿತಿ ಮತ್ತು ಕಂಪನಿಗಳಿಗೆ ಗುತ್ತಿಗೆ, ಖರ್ಚು ವೆಚ್ಚದ ಸಂಪೂರ್ಣ ಕಾಮಾಗಾರಿಗಳವಾರು ಮಾಹಿತಿ ನೀಡುವುದು?

## ಭೂ ಕಂದಾಯ ವ್ಯಾಪ್ತಿಯ ಮೇಲ್ಮನವಿಗಳ ಕುರಿತು

**ಶ್ರೀ ಎಂ.ಕೆ. ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೩೨ (೯೫೧) ಮಾನ್ಯ ಕಂದಾಯ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :–

ಭೂ ಕಂದಾಯ ವ್ಯಾಪ್ತಿಯಲ್ಲಿ ಬರುವ ಮೇಲ್ಮನವಿಗಳನ್ನು ಮತ್ತು ಪ್ರಕರಣಗಳನ್ನು ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳು, ತಹಶೀಲ್ದಾರ್‌ಗಳು ಕಾಲಮಿತಿಯೊಳಗೆ ವಿಲೇವಾರಿ ಮಾಡಲು ಮತ್ತು ಕಾಲಮಿತಿ ನಿಗಧಿಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ; ಹಾಗಿದ್ದಲ್ಲಿ, ಸರ್ಕಾರ ಇದುವರೆಗೂ ತೆಗೆದುಕೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)

## ರೈತರಿಗೆ ಜಮೀನು ಮಂಜೂರು ಮಾಡುವ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) –**

೮೩೩ (೯೧೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿ ಎಷ್ಟು ಸರ್ಕಾರಿ ಗೋಮಾಳಗಳಿವೆ; ಅವುಗಳ ವಿಸ್ತೀರ್ಣ ಎಷ್ಟು; ಅದರಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಪೂರ್ಣ ವಿವರ ನೀಡುವುದು)

(ಆ) ಹಾಗಿದ್ದಲ್ಲಿ, ಸಾಗುವಳಿ ಮಾಡುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಲ್ಲಿ ನಮೂನೆ–೫೩ನ್ನು ಸಲ್ಲಿಸಿದ ಹಾಗೂ ಸಲ್ಲಿಸದ ರೈತರಿಗೆ ಜಮೀನು ಮಂಜೂರು ಮಾಡಲು ಸರ್ಕಾರ ಕೈಗೊಳ್ಳುತ್ತಿರುವ ಕ್ರಮಗಳೇನು;

(ಇ) ಹಾಗಿದ್ದಲ್ಲಿ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ರೈತರಿಗೆ ಜಮೀನು ನೀಡಿದ್ದಲ್ಲಿ, ಗ್ರಾಮ ಮತ್ತು ಫಲಾನುಭವಿಗಳ ಮಾಹಿತಿಯನ್ನು ತಾಲ್ಲೂಕುವಾರು ಒದಗಿಸುವುದು?

## ಒತ್ತುವರಿ ಭೂಮಿಯನ್ನು ವಶಪಡಿಕೊಳ್ಳುವ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) –**

೭೩೪ (೯೧೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ನಗರಸಭೆ ಮತ್ತು ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ೫ ಕಿ.ಮೀ. ನೊಳಗೆ ಇರುವ ಸರ್ಕಾರಿ ಜಮೀನುಗಳೆಷ್ಟು; ಅವುಗಳ ವಿಸ್ತೀರ್ಣವೆಷ್ಟು; (ಸರ್ವೆ ಸಂಖ್ಯೆಗಳೊಂದಿಗೆ, ಸಂಸ್ಥೆಗಳವಾರು ಪೂರ್ಣ ವಿವರ ನೀಡುವುದು)

(ಆ) ಹಾಗಿದ್ದಲ್ಲಿ, ಸರ್ಕಾರಿ ಜಾಗಗಳಲ್ಲಿ ಒತ್ತುವರಿಯಾಗಿರುವ ಜಮೀನಿನ ವಿಸ್ತೀರ್ಣ ಎಷ್ಟು;

(ಇ) ಒತ್ತುವರಿಯಾಗಿರುವ ಪ್ರಕರಣಗಳಲ್ಲಿ ಸರ್ವೆ ಮಾಡಿ ಒತ್ತುವರಿ ಭೂಮಿಯನ್ನು ವಶಪಡಿಸಿಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಪೂರ್ಣ ಮಾಹಿತಿ ನೀಡುವುದು)

## ಜಲಸಂಪನ್ಮೂಲ ಇಲಾಖೆಯಿಂದ SCP/TSP ಯೋಜನೆಗೆ ಬಿಡುಗಡೆಯಾದ ಅನುದಾನದ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) –**

೮೩೫ (೯೧೨) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ ಜಲಸಂಪನ್ಮೂಲ ಇಲಾಖೆಯಿಂದ ವಿಶೇಷ ಘಟಕ ಯೋಜನೆ (SCP) ಹಾಗೂ ಗಿರಿಜನ ಉಪ ಯೋಜನೆ (TSP) ಅಡಿಯಲ್ಲಿ ಪ್ರತಿಯೊಂದು ಕ್ಷೇತ್ರಕ್ಕೆ ಎಷ್ಟು ಅನುದಾನ ಮಂಜೂರು ಮಾಡಲಾಗಿದೆ; (ಬೀದರ್ ಜಿಲ್ಲೆಯ ಪೂರ್ಣ ವಿವರ ನೀಡುವುದು)

(ಆ) ಹಾಗಿದ್ದಲ್ಲಿ, ಈ ಯೋಜನೆಯಡಿಯಲ್ಲಿ ಜಿಲ್ಲೆಯ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ; ಕಾಮಗಾರಿಗಳಿಗೆ ಬಿಡುಗಡೆ ಮಾಡಿರುವ ಅನುದಾನ ಎಷ್ಟು; ಈ ಕಾಮಗಾರಿಗಳ ರೂಪುರೇಷಗಳೇನು? (ತಾಲ್ಲೂಕುವಾರು, ವರ್ಷವಾರು ವಿವರ ನೀಡುವುದು)

## ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಪರಿಷ್ಕರಣೆ ಹೆಚ್ಚಳ ಮಾಡಿರುವ ಕುರಿತು ಮತ್ತು ವಲಯವಾರು ವಿಂಗಡಣೆ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

೮೩೬ (೧೦೫೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರ ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಪರಿಷ್ಕರಣೆ ಹೆಚ್ಚಳದ ಹೆಸರಿನಲ್ಲಿ ವಲಯವಾರು ವಿಂಗಡಣೆ ಮಾಡಿರುವುದು ನಿಜವೇ;

(ಆ) ನಿಜವಾಗಿದ್ದಲ್ಲಿ, ಸಂಪೂರ್ಣ ವಿವರ ನೀಡುವುದು;

(ಇ) ಯಾವ ಮಾನದಂಡದ ಮೇಲೆ ಈ ರೀತಿಯ ವಲಯವಾರು ವಿಂಗಡಣೆ ಮಾಡಲಾಗಿದೆ;

(ಈ) ಈ ರೀತಿಯ ವಲಯವಾರು ವಿಂಗಡಣೆಯಿಂದಾಗಿ ಆಸ್ತಿ ತೆರಿಗೆಯಲ್ಲಿ ಯಾವ ಯಾವ ವಲಯದಲ್ಲಿ ಎಷ್ಟು ಪ್ರಮಾಣದ ಹೆಚ್ಚುವರಿ ಉಂಟಾಗಿರುತ್ತದೆ; (ವಿವರ ನೀಡುವುದು)

(ಉ) ಇದರಿಂದಾಗಿ ಬಡ ಆಸ್ತಿದಾರರು ದುಪ್ಪಟ್ಟು ತೆರಿಗೆಯನ್ನು ಕಟ್ಟುವಂತಾಗಿ, ಇದು ಆತುರದ ಹಾಗೂ ಅವೈಜ್ಞಾನಿಕ ವರ್ಗೀಕರಣವೆಂದು ಅನಿಸುತ್ತಿಲ್ಲವೇ; ಈ ಕ್ರಮವನ್ನು ಸರ್ಕಾರವು ಹೇಗೆ ಸಮರ್ಥಿಸಿಕೊಳ್ಳುತ್ತದೆ; ಇದನ್ನು ಮತ್ತೊಮ್ಮೆ ಪರಿಶೀಲಿಸಲು ಚಿಂತನೆ ನಡೆಸಲಾಗಿದೆಯೇ?

## ರಾಜ್ಯ ನದಿಗಳ ನೀರು ಮಲೀನಗೊಂಡಿರುವ ಕುರಿತು ಮತ್ತು ಈ ಸಂಬಂಧ ತೆಗೆದುಕೊಳ್ಳಬೇಕಾಗಿರುವ ಕಠಿಣ ಕ್ರಮಗಳ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

೮೩೭ (೧೦೫೫) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ನದಿಗಳ ನೀರು ಮಲೀನಗೊಂಡ ಪರಿಣಾಮ, ಸುಮಾರು ೧೫ ನದಿಗಳ ತೀರ ಪ್ರದೇಶಗಳು ಕಲುಷಿತಗೊಂಡಿದೆಯೆಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ವರದಿ ನೀಡಿರುವುದು ನಿಜವೇ; ನಿಜವಾಗಿದ್ದಲ್ಲಿ, ವಿವರ ನೀಡುವುದು;

(ಆ) ಮಲೀನಗೊಳ್ಳುವುದನ್ನು ತಡೆಗಟ್ಟಲು ಮಂಡಳಿಯು ನೀಡಿರುವ ಸಲಹೆಗಳೇನು;

(ಇ) ಈ ಸಂಬಂಧ ನದಿ ನೀರಿನ ಮಲೀನತೆಯನ್ನು ತಡೆಗಟ್ಟಲು ಯಾವ ರೀತಿಯ ಕಠಿಣ ಕ್ರಮವನ್ನು ಸರ್ಕಾರದಿಂದ ಕೈಗೊಳ್ಳಲಾಗಿದೆ? (ವಿವರ ನೀಡುವುದು)

## ಮುಜರಾಯಿ ದೇವಸ್ಥಾನಗಳಲ್ಲಿ ಡಿಸೆಂಬರ್ ತಿಂಗಳಿನ ಒಳಗೆ ಹುಂಡಿ ಹಣವನ್ನು ಬ್ಯಾಂಕುಗಳಿಗೆ ಜಮಾ ಮಾಡಲು ವಿಶೇಷ ಅವಕಾಶ ಕಲ್ಪಿಸಿಕೊಳ್ಳುವ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

೮೩೮ (೧೦೫೬) ಮಾನ್ಯ ಜವಳಿ ಹಾಗೂ ಮುಜರಾಯಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮುಜರಾಯಿ ಇಲಾಖೆ ವ್ಯಾಪ್ತಿಗೆ ಬರುವ ದೇವಸ್ಥಾನಗಳ ಸಂಖ್ಯೆ ಎಷ್ಟು; ಇಲ್ಲಿ ಹುಂಡಿಗಳಲ್ಲಿ ವರ್ಷಾವಾರು ಅಂದಾಜು ಒಟ್ಟು ಎಷ್ಟು ಹಣ ಸಂಗ್ರಹವಾಗುತ್ತದೆ;

(ಆ) ಈ ಹುಂಡಿಗಳನ್ನು ತೆಗೆಯಲು ಮತ್ತು ಹಣವನ್ನು ಜಮಾ ಮಾಡಲು ಯಾವ ರೀತಿಯ ನಿಯಮಗಳಿವೆ;

(ಇ) ಈ ಡಿಸೆಂಬರ್ ಒಳಗೆ ೫೦೦ ಮತ್ತು ೧೦೦೦ ಮುಖಬೆಲೆ ನೋಟುಗಳನ್ನು ಬ್ಯಾಂಕುಗಳಿಗೆ ಜಮಾ ಮಾಡಬೇಕಾಗಿರುವುದು ನಿಜವಲ್ಲವೆ;

(ಈ) ಹೀಗಿರುವಾಗ ರಾಜ್ಯದ ಮುಜರಾಯಿ ಇಲಾಖೆಯ ದೇವಾಲಯಗಳ ಹುಂಡಿಯನ್ನು ಡಿಸೆಂಬರ್ ಒಳಗೆ ತೆಗೆದು ಬ್ಯಾಂಕುಗಳಿಗೆ ಜಮಾ ಮಾಡಲು ವಿಶೇಷ ತುರ್ತು ಕ್ರಮವನ್ನು ತೆಗೆದುಕೊಳ್ಳಲು ಸರ್ಕಾರ ಮುಂದಾಗುವುದೇ?

## ಸರ್ಕಾರಿ ಭೂಮಿಗಳಾದ ಸ್ಮಶಾನ, ಕೆರೆ, ಗೋಮಾಳಗಳ ಒತ್ತುವರಿಯನ್ನು ತೆರವುಗೊಳಿಸುವ ಬಗ್ಗೆ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೩೯ (೮೯೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಡಗು ಜಿಲ್ಲೆ ವ್ಯಾಪ್ತಿಯಲ್ಲಿರುವ ಸರ್ಕಾರಿ ಭೂಮಿ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಆ) ಆ ಪೈಕಿ ಸ್ಮಶಾನ, ಗೋಮಾಳ, ಖರಾಬು, ಸರ್ಕಾರಿ ಕೆರೆಗಳ ಒಟ್ಟು ವಿಸ್ತೀರ್ಣ ಎಷ್ಟು; (ಕಂದಾಯ ಗ್ರಾಮಗಳವಾರು ಪ್ರತ್ಯೇಕ ಸಹಿತ ವಿವರಗಳನ್ನು ನೀಡುವುದು)

(ಇ) ಇದರಲ್ಲಿ ಒತ್ತುವರಿಯಾಗಿರುವ ಜಮೀನಿನ ವಿಸ್ತೀರ್ಣ ಎಷ್ಟು; ಒತ್ತುವರಿದಾರರ ಹೆಸರು ಸಹಿತ ಸರ್ವೆ ನಂ. ಹಾಗೂ ವಿಸ್ತೀರ್ಣದ ವಿವರ ನೀಡುವುದು;

(ಈ) ಸದರಿ ಒತ್ತುವರಿಯನ್ನು ತೆರವುಗೊಳಿಸಲು ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)

## ರಾಜ್ಯದಲ್ಲಿರುವ ಬ್ರಾಹ್ಮಣ ಸಮುದಾಯಕ್ಕೆ ಜಾತಿ ದೃಢೀಕರಣ ಪತ್ರ ನೀಡದಿರುವ ಬಗ್ಗೆ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

ಲ೪೦ (೮೯೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಜಾತಿಗಳನ್ನು ಯಾವ ಯಾವ ಪ್ರವರ್ಗಕ್ಕೆ ಸೇರಿಸಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿನ ಬ್ರಾಹ್ಮಣ ಜಾತಿಯವರಿಗೆ ಬ್ರಾಹ್ಮಣ ಎಂದು ಜಾತಿ ದೃಢೀಕರಣ ಪತ್ರ ನೀಡುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬ್ರಾಹ್ಮಣ ಜಾತಿ ದೃಢೀಕರಣ ಪತ್ರ ನೀಡಲು ಇರುವ ತೊಡಕುಗಳೇನು;

(ಇ) ಬ್ರಾಹ್ಮಣ ಜಾತಿಯನ್ನು ಯಾವ ಪ್ರವರ್ಗಕ್ಕೆ ಸೇರಿಸಲಾಗಿದೆ; (ವಿವರ ನೀಡುವುದು)

(ಈ) ಇತ್ತೀಚಿನ ದಿನಗಳಲ್ಲಿ ಎಲ್ಲಾ ಜಾತಿಯವರಿಗೆ ಜಾತಿ ದೃಢೀಕರಣ ಪತ್ರ ಅವಶ್ಯಕತೆಯಿದ್ದು, ಜಾತಿ ದೃಢೀಕರಣ ಪತ್ರ ನೀಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? (ಜಾತಿ ದೃಢೀಕರಣ ಪತ್ರಕ್ಕೆ ಸಂಬಂಧಿಸಿದಂತೆ ಕಾಲ ಕಾಲಕ್ಕೆ ಹೊರಡಿಸಿರುವ ಸರ್ಕಾರಿ ಆದೇಶದ ಪ್ರತಿಗಳನ್ನು ಒದಗಿಸುವುದು)

## ರಾಜ್ಯದಲ್ಲಿರುವ ಕೆರೆಗಳ ಒತ್ತುವರಿಯನ್ನು ತೆರವುಗೊಳಿಸುವ ಬಗ್ಗೆ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೪೧ (೮೯೩) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಡಗು ಜಿಲ್ಲೆಯ ವ್ಯಾಪ್ತಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒಳಪಡುವ ಕೆರೆಗಳ ಸಂಖ್ಯೆ ಎಷ್ಟು; (ಹೆಸರುಗಳೊಂದಿಗೆ ಗ್ರಾಮಗಳ ವಿವರ ನೀಡುವುದು)

(ಆ) ಈ ಕೆರೆಗಳ ವಿಸ್ತೀರ್ಣವೆಷ್ಟು; ಈ ಕೆರೆಗಳು ಒತ್ತುವರಿಯಾಗಿರುವುದನ್ನು ಗುರುತಿಸಲಾಗಿದೆಯೇ; ಒತ್ತುವರಿಯಾಗಿದ್ದಲ್ಲಿ, ಒತ್ತುವರಿದಾರರ ವಿರುದ್ಧ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)

(ಇ) ಕೆರೆಗಳನ್ನು ಉಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು)

## ರಾಜ್ಯದಲ್ಲಿನ ವಿವಿಧ ಇಲಾಖೆಗಳ ವ್ಯಾಜ್ಯ ವಿಲೇವಾರಿಗೆ ನಿಯಮಗಳ ಕುರಿತು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) –**

೮೪೨ (೯೦೫) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ವ್ಯಾಜ್ಯ ವಿವಾದ ಬಗೆಹರಿಸಲು ಸರ್ಕಾರದ ವತಿಯಿಂದ ಕೋರ್ಟ್ ಮೊರೆಹೋದ ಪ್ರಕರಣಗಳಲ್ಲಿ ಸರ್ಕಾರಿ ವಕೀಲರಿಗೆ ನೀಡುವ ಶುಲ್ಕಕ್ಕೆ ಅನುಸರಿಸುವ ಮಾನದಂಡಗಳೇನು;

(ಆ) ಇಂತಹ ಪ್ರಕರಣಗಳಲ್ಲಿ ಸರ್ಕಾರದ ವಿವಿಧ ಇಲಾಖೆಗಳ ಈ ವ್ಯಾಜ್ಯದ ಶುಲ್ಕ ಪಾವತಿ ಮಾಡಲು ಬಾಕಿ ಇರುವ ಪ್ರಕರಣಗಳು ಬೆಳಕಿಗೆ ಬಂದಿವೆಯೇ;

(ಇ) ಬಂದಿದ್ದಲ್ಲಿ, ಅಂತಹ ಪ್ರಕರಣಗಳಾವುವು; (ಇಲಾಖಾವಾರು ವಿವರ ಒದಗಿಸುವುದು) ಇದುವರೆಗೂ ಶುಲ್ಕ ಬಾಕಿಗೆ ಕಾರಣಗಳೇನು;

(ಈ) ಅದೇ ರೀತಿ ರಾಜ್ಯದ ಜಲ ವಿವಾದದ ಕುರಿತು ವಾದ ಮಂಡಿಸುವ ವಕೀಲರಿಗೆ ಸಮರ್ಪಕ ಶುಲ್ಕ ನೀಡದಿರುವುದು ನಿಜವೇ; ಇದಕ್ಕೆ ಕಾರಣಗಳೇನು;

(ಉ) ಕರ್ನಾಟಕದ ಯಾವ ಯಾವ ಜಲ ವಿವಾದಕ್ಕೆ ಸಂಬಂಧಪಟ್ಟಂತೆ ಯಾವ್ಯಾವ ವಕೀಲರನ್ನು ಸರ್ಕಾರ ನೇಮಕ ಮಾಡಿಕೊಂಡಿದೆ; ಅವರಿಗೆ ನೀಡುವ ಶುಲ್ಕವೆಷ್ಟು; ಇದುವರೆಗೂ ಎಷ್ಟು ಶುಲ್ಕ ಬಾಕಿ ಇದೆ; ಯಾವ ಯಾವ ಜಲ ವಿವಾದಲ್ಲಿ ಎಷ್ಟೆಷ್ಟು ಶುಲ್ಕವನ್ನು ರಾಜ್ಯ ಸರ್ಕಾರ ಪಾವತಿ ಮಾಡಿದೆ? (೩ ವರ್ಷದ ವಿವಾದವಾರು, ವರ್ಷವಾರು ವಿವರ ಒದಗಿಸುವುದು)

## ನಗರ ಪ್ರದೇಶಗಳಲ್ಲಿ ಮನೆ ನಿರ್ಮಿಸಿಕೊಂಡ ಫಲಾನುಭವಿಗಳಿಗೆ ಹಕ್ಕುಪತ್ರ ನೀಡುವ ಕುರಿತು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) –**

೮೪೩ (೯೦೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನಗರ ಪ್ರದೇಶದ ಸರ್ಕಾರಿ ಜಾಗಗಳಲ್ಲಿ ಮನೆ ನಿರ್ಮಿಸಿಕೊಂಡ ಅರ್ಹ ಫಲಾನುಭವಿಗಳಿಗೆ ಹಕ್ಕುಪತ್ರ ನೀಡಲು ಸರ್ಕಾರ ಮುಂದಾಗಿರುವುದು ನಿಜವೇ;

(ಆ) ಈ ಪ್ರಕ್ರಿಯೆ ಯಾವ ಹಂತದಲ್ಲಿದೆ; ಅಕ್ರಮವಾಗಿ ಮನೆ ನಿರ್ಮಿಸಿಕೊಂಡವರ ಅಂಕಿ–ಸಂಖ್ಯೆ ವಿವರಗಳನ್ನು ಜಿಲ್ಲಾವಾರು ನೀಡುವುದು;

(ಇ) ಸದರಿ ಪ್ರಕ್ರಿಯೆಗಳನುಸಾರ ಸಕ್ರಮಕ್ಕಾಗಿ ಅರ್ಜಿ ಸಲ್ಲಿಸಿರುವವರ ವಿವರಗಳನ್ನು ಜಿಲ್ಲಾವಾರು ನೀಡುವುದು; ಜಾಗ ಸಕ್ರಮಕ್ಕೆ ಸರ್ಕಾರ ಅನುಸರಿಸುವ ಮಾನದಂಡಗಳೇನು;

(ಈ) ಪ್ರಸ್ತುತ ಅಕ್ರಮ–ಸಕ್ರಮ ಅರ್ಜಿ ಸ್ವೀಕಾರವನ್ನು ಸರ್ಕಾರ ಸ್ಥಗಿತಗೊಳಿಸಿದೆಯೇ; ಇದಕ್ಕೆ ಕಾರಣಗಳೇನು; ಸದರಿ ಪ್ರಕ್ರಿಯೆಯನ್ನು ಯಾವಾಗ ಪೂರ್ಣಗೊಳಿಸಲು ಸರ್ಕಾರ ಮುಂದಾಗಿದೆ;

(ಉ) ಅವಧಿ ವಿಸ್ತರಣೆಗೆ ಇರುವ ಅಡ್ಡಿ–ಆತಂಕಗಳೇನು; ಇದರಿಂದಾಗಿ ಸರ್ಕಾರಕ್ಕೆ ಬರುವ ಆದಾಯವೆಷ್ಟು? (ವಿವರ ನೀಡುವುದು)

## ಕೈಗಾರಿಕೆಯ ಉದ್ದೇಶಕ್ಕಾಗಿ ಕಂದಾಯ ಭೂಮಿ ನೀಡುವ ಕುರಿತು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) –**

೮೪೪ (೯೦೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೈಗಾರಿಕೆಯ ಉದ್ದೇಶಕ್ಕಾಗಿ ಸರ್ಕಾರದ ಕಂದಾಯ ಭೂಮಿಯನ್ನು ಉಚಿತವಾಗಿ ನೀಡಲು ಸರ್ಕಾರ ಮುಂದಾಗಿದೆಯೇ; ಮುಂದಾಗಿದ್ದಲ್ಲಿ, ಕಾರಣಗಳೇನು;

(ಆ) ಸರ್ಕಾರದ (ಕಂದಾಯ ಇಲಾಖೆಯ) ವ್ಯಾಪ್ತಿಯಲ್ಲಿರುವ ಸರ್ಕಾರಿ ಭೂಮಿ ಎಷ್ಟಿದೆ; (ಜಿಲ್ಲಾವಾರು ಲಭ್ಯವಿರುವ ಜಾಗದ ಹೆಕ್ಟೇರ್ ವಿಸ್ತೀರ್ಣವಾರು ವಿವರಗಳನ್ನು ಒದಗಿಸುವುದು)

(ಇ) ಈ ಪೈಕಿ ಕಂದಾಯ ಇಲಾಖೆಯ ಖರಾಜು ಹಾಗೂ ಗೋಮಾಳ ಜಾಗವು ಸೇರಿದೆಯೇ; ಹಾಗಿದ್ದಲ್ಲಿ, ಕೈಗಾರಿಕೆಯ ಉದ್ದೇಶದ ಪೂರೈಕೆಗಾಗಿ ಯಾವ ಇಲಾಖೆಯ ಅಧೀನಕ್ಕೆ ಜಾಗ ಹಸ್ತಾಂತರಿಸಲಾಗುತ್ತದೆ; ಇದಕ್ಕೆ ಅನುಸರಿಸುವ ಮಾನದಂಡ ಪ್ರಕ್ರಿಯೆಗಳೇನು;

(ಈ) ಸದರಿ ಭೂಮಿಯನ್ನು ಹಂಚಿಕೆ ಮಾಡಿದ ಎಕರೆ ಜಮೀನುವಾರು, ಜಿಲ್ಲಾವಾರು ವಿವರ ಒದಗಿಸುವುದು ; ಭೂಮಿ ಖರೀದಿಗೆ ಕನಿಷ್ಠ ಮಾರ್ಗಸೂಚಿ ದರವನ್ನಾದರೂ ಪಾವತಿಸದಿರುವುದು ನಿಜವೇ; ಇದಕ್ಕೆ ಕಾರಣಗಳೇನು;

(ಉ) ಉಚಿತವಾಗಿ ಪಡೆಯುವ ಈ ಜಾಗವನ್ನು ಕೈಗಾರಿಕೋದ್ಯಮಿಗಳಿಗೆ ಅಗ್ಗದ ದರದಲ್ಲಿ ಪರಭಾರೆ ಮಾಡುವ ಅಥವಾ ಗುತ್ತಿಗೆ ನೀಡುವ ಕ್ರಮವನ್ನು ತಪ್ಪಿಸಲು ಸರ್ಕಾರ ಮುಂದಾಗುವುದೇ? (ವಿವರ ಒದಗಿಸುವುದು)

## ಶ್ರೀರಾಮಚಂದ್ರಸ್ವಾಮಿ ದೇವಸ್ಥಾನ, ಶ್ರೀರಾಂಪುರ, ಬೆಂಗಳೂರು ಹಣದ ದುರ್ವಿನಿಯೋಗ ಮತ್ತು ದುರುಪಯೋಗದ ಬಗ್ಗೆ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) –**

೮೪೫ (೯೧೮) ಮಾನ್ಯ ಜವಳಿ ಮತ್ತು ಮುಜರಾಯಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರ ಶ್ರೀರಾಮಪುರದಲ್ಲಿರುವ ೧೯೨೯ರಲ್ಲಿ ಸ್ಥಾಪಿತವಾಗಿರುವ ಶ್ರೀ ರಾಮಚಂದ್ರಸ್ವಾಮಿ ದೇವಾಲಯವು ಮುಜರಾಯಿ ವ್ಯಾಪ್ತಿಗೆ ಒಳಪಟ್ಟಿದೆಯೇ; ಅಥವಾ ಖಾಸಗಿಯೇ; ಖಾಸಗಿಯಾಗಿದ್ದಲ್ಲಿ, ಟ್ರಸ್ಟ್‌ನ ಬೈಲಾ ಕಾಪಿ ಒದಗಿಸುವುದು;

(ಆ) ಟ್ರಸ್ಟ್‌ನವರು ೨೦೧೫ರಲ್ಲಿ ಭಕ್ತಾಧಿಗಳಿಂದ ಕೋಟ್ಯಾಂತರ ರೂಪಾಯಿ ಹಣವನ್ನು ಸಂಗ್ರಹಿಸಿ ನವೀಕರಣ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಮಂಜೂರಾತಿಯಾಗಿರುವ ನಕಾಶೆಯನ್ನು ಒದಗಿಸುವುದು;

(ಇ) ಸದರಿ ಟ್ರಸ್ಟ್‌ನವರು ಮಾಡಿರುವ ನವೀಕರಣವು ದೇವಾಲಯ ವಾಸ್ತುಶಾಸ್ತ್ರಕ್ಕೆ ವ್ಯತಿರಿಕ್ತವಾಗಿದ್ದು/ಇದರಿಂದ ಮಹಾದೋಷವುಂಟಾಗಿದೆಯೆಂದು ಮುಜರಾಯಿ ಇಲಾಖೆಯ ಆಗಮಶಾಸ್ತ್ರ ವಿದ್ವಾಂಸರು ಇಲಾಖೆಗೆ ವರದಿ ನೀಡಿರುವುದು ನಿಜವೇ; ವರದಿಯನ್ನು ಒದಗಿಸುವುದು;

(ಈ) ಭಕ್ತಾಧಿಗಳು ಶ್ರದ್ಧಾಭಕ್ತಿಯಿಂದ ನೀಡಿರುವ ದೇಣಿಗೆಯನ್ನು ಈ ರೀತಿಯಾಗಿ ದುರ್ವಿನಿಯೋಗ, ದುರುಪಯೋಗ ಮಾಡಿರುವ ಹಾಲಿ ಟ್ರಸ್ಟ್‌ನ್ನು ಮುಜರಾಯಿ ಕಾಯ್ದೆ ಅನುಸಾರ ವಜಾ ಮಾಡಿ ಬೇರೆ ಟ್ರಸ್ಟ್‌ಗೆ ವಹಿಸಲು ಸರ್ಕಾರಕ್ಕೆ ಏನಾದರೂ ಅಡ್ಡಿ ಇದೆಯೇ?

## ಕಾಮನ್ ಪೂಲಿಂಗ್ ಫಂಡ್ ಬಗ್ಗೆ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) –**

೮೪೬ (೯೨೧) ಮಾನ್ಯ ಜವಳಿ ಮತ್ತು ಮುಜರಾಯಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಮುಜರಾಯಿ ಎಬಿಸಿ ವೃಂದದ ದೇವಾಲಯಗಳಿಂದ ಸರ್ಕಾರದ "ಕಾಮನ್ ಪೂಲಿಂಗ್ ಫಂಡ್" ಗೆ ಕಳೆದ ಮೂರು ಆರ್ಥಿಕ ವರ್ಷದಲ್ಲಿ ಸಂಗ್ರಹವಾಗಿರುವ ಮೊತ್ತವೆಷ್ಟು; ಠೇವಣಿಯಾಗಿ ಇರಿಸಿರುವ ಮೊತ್ತವೆಷ್ಟು; (ಪ್ರತಿ ದೇವಾಲಯಗಳ ಮಾಹಿತಿ ಒದಗಿಸುವುದು)

(ಆ) ಕಳೆದ ಮೂರು ಆರ್ಥಿಕ ವರ್ಷದಲ್ಲಿ "ಕಾಮನ್ ಪೂಲಿಂಗ್ ಫಂಡ್" ನಿಂದ ಯಾವ ಯಾವ ಸಾಮಾಜಿಕ ಸಂಸ್ಥೆಗಳಿಗೆ ಅಥವಾ ಇನ್ನಿತರ ಉದ್ದೇಶಗಳಿಗಾಗಿ ಹಣ ಖರ್ಚಾಗಿರುವ ವಿವರಗಳನ್ನು ಒದಗಿಸುವುದು;

(ಇ) "ಕಾಮನ್ ಪೂಲಿಂಗ್ ಫಂಡ್" ನಿಂದ ಹಜ್ ಯಾತ್ರೆಗೆ ಮತ್ತು ಚರ್ಚ್‌ಗೆ ಬಿಡುಗಡೆಯಾಗಿರುವ ಹಣವೆಷ್ಟು?

## ಬಗರ್ ಹುಕುಂ ಜಮೀನು ಬಗ್ಗೆ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) –**

೮೪೭ (೯೨೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಹಲವು ವರ್ಷಗಳಿಂದ ನಿಧಾನಗತಿಯಲ್ಲಿ ಸಾಗುತ್ತಿರುವ "ಬಗರ್ ಹುಕುಂ ಜಮೀನು" ಹಾಗೂ ವಿಶೇಷ ಹಕ್ಕಿನ ಭೂಮಿ (ಪ್ರಿವಿಲೇಜ್ ಲ್ಯಾಂಡ್, ಕುಮ್ಕಿ, ಕಾನು, ಜಮ್ಮಾಬಾಣೆ ಇತ್ಯಾದಿ) ಮಂಜೂರಾತಿಗೆ ಸಲ್ಲಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಈ ಅರ್ಜಿಗಳು ವಿಲೇವಾರಿಯಾಗದೆ ವಿಳಂಬವಾಗಿರುವುದಕ್ಕೆ ಕಾರಣವೇನು;

(ಇ) ಈ ಅರ್ಜಿಗಳು ತ್ವರಿಗತಿಯಲ್ಲಿ ವಿಲೇವಾರಿಯಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮವೇನು?

## ಅಂತ್ಯ ಸಂಸ್ಕಾರಕ್ಕೆ ಸಹಾಯನಿಧಿ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) –**

೮೪೮ (೯೧೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರದಿಂದ ಅಂತ್ಯ ಸಂಸ್ಕಾರ ಸಹಾಯ ನಿಧಿ ಸಹಾಯಕ್ಕೆ ಇರುವ ಮಾನದಂಡವೇನು;

(ಆ) ಬಡತನ ರೇಖೆಗಿಂತ ಕೆಳಗಿರುವ ಕುಟುಂಬದಲ್ಲಿ ಯಾರಾದರೂ ನಿಧನ ಹೊಂದಿದ್ದರೆ, ಸರ್ಕಾರದಿಂದ ಅಂತ್ಯ ಕ್ರಿಯೆಗಾಗಿ ಅಂತ್ಯ ಸಂಸ್ಕಾರ ಸಹಾಯನಿಧಿ ಯೋಜನೆಯಿಂದ ಎಷ್ಟು ಸಹಾಯಧನ ನೀಡಲಾಗುವುದು;

(ಇ) ಈ ಸಹಾಯಧನವನ್ನು ನಿಧನರಾದ ಎಷ್ಟು ದಿನಗಳಲ್ಲಿ ಫಲಾನುಭವಿಗಳಿಗೆ ನೀಡಲಾಗುವುದು;

(ಈ) ಅಂತ್ಯ ಸಂಸ್ಕಾರ ಸಹಾಯನಿಧಿ ಯೋಜನೆಯಡಿಯಲ್ಲಿ ಕಳೆದ ೩ ವರ್ಷಗಳಲ್ಲಿ ಸಹಾಯಧನ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಉ) ಅಂತ್ಯ ಸಂಸ್ಕಾರ ಸಹಾಯನಿಧಿ ಯೋಜನೆಯಲ್ಲಿ ಅರ್ಜಿ ಸಲ್ಲಿಸಿ ೩–೪ ತಿಂಗಳ ನಂತರ ಫಲಾನುಭವಿಗಳಿಗೆ ಹಣ ಬಿಡುಗಡೆಯಾಗುತ್ತಿದ್ದು, ಇದರ ವಿಳಂಬಕ್ಕೆ ಕಾರಣವೇನು; (ವಿವರ ನೀಡುವುದು)

(ಊ) ಪ್ರತಿ ತಾಲ್ಲೂಕಿನಲ್ಲೂ ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು;

(ಋ) ಸರ್ಕಾರಿ ನೌಕರರು ಮೃತಪಟ್ಟಾಗ, ಅವರ ಅಂತ್ಯ ಸಂಸ್ಕಾರಕ್ಕೆ ಹಣ ಸಂದಾಯವಾಗುವಂತೆ ಬಡವರಿಗೆ ನೀಡುವ ಸಹಾಯ ನಿಧಿಯನ್ನು ನಿರ್ವಹಿಸುವ ಅಧಿಕಾರವನ್ನು ತಹಸೀಲ್ದಾರ್‌ಗೆ ನೀಡಿದರೆ ಯೋಜನೆ ಅನುಷ್ಠಾನಕ್ಕೆ ತಂದಿರುವ ಸಾರ್ಥಕತೆ ಆಗುತ್ತದೆಯಲ್ಲವೆ;

(ಎ) ಕೆಲವು ಅಧಿಕಾರಿಗಳು ಸಹಾಯಧನ ನೀಡಲು ಲಂಚದ ಬೇಡಿಕೆಯಿಟ್ಟು ಲಂಚ ಪಡೆಯುವ ವೇಳೆ ಪೊಲೀಸರ ಬಲೆಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮವೇನು?

## ಎ.ಬಿ.ಸಿ. ವೃಂದದ ದೇವಾಲಯಗಳು

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) –**

೮೪೯ (೯೧೭) ಮಾನ್ಯ ಜವಳಿ ಮತ್ತು ಮುಜರಾಯಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಇರುವ ಒಟ್ಟು ಮುಜರಾಯಿ ದೇವಾಲಯಗಳೆಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಆ) ಇದರಲ್ಲಿ ಎ.ಬಿ. ಮತ್ತು ಸಿ ವೃಂದದ ದೇವಾಲಯಗಳೆಷ್ಟು;

(ಇ) ಮುಜರಾಯಿ ದೇವಾಲಯಗಳಲ್ಲಿ ಕರ್ತವ್ಯನಿರ್ವಹಿಸುತ್ತಿರುವ ಅರ್ಚಕರ ಜಾತಿವಾರು ವಿವರಗಳ ಮಾಹಿತಿ ಸರ್ಕಾರದ ಬಳಿ ಇದೆಯೇ; ಇದ್ದಲ್ಲಿ, ಮಾಹಿತಿ ಒದಗಿಸುವುದು?

## ಕಳೆದ ಮೂರು ವರ್ಷಗಳಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಬಗ್ಗೆ

**ಶ್ರೀ ಸೋಮಣ್ಣ ಮ ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು)–**

೮೫೦ (೧೦೬೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ ಎಷ್ಟು; (ವರ್ಷವಾರು, ಜಿಲ್ಲಾವಾರು ವಿವರದೊಂದಿಗೆ ಹಾವೇರಿಯ ಸಂಪೂರ್ಣ ವಿವರ ನೀಡುವುದು)

(ಆ) ಕಳೆದ ೩ ವರ್ಷಗಳಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳಿಗೆ ಯಾವ ಪರಿಹಾರ ನೀಡಲಾಗಿದೆ; ಎಷ್ಟು ಪ್ರಕರಣಗಳಲ್ಲಿ ಪರಿಹಾರ ನೀಡಲು ಬಾಕಿಯಿದೆ; (ವರ್ಷವಾರು, ಜಿಲ್ಲಾವಾರು ವಿವರದೊಂದಿಗೆ ಹಾವೇರಿಯ ಸಂಪೂರ್ಣ ವಿವರ ನೀಡುವುದು)

(ಇ) ಸಾಲಬಾಧೆ ತಾಳದೇ ಆತ್ಮಹತ್ಯೆ ಮಾಡಿಕೊಂಡ ರೈತರ ಸಂತ್ರಸ್ತ ಕುಟುಂಬಸ್ಥರು ಪರಿಹಾರಕ್ಕಾಗಿ ಅಲೆದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಸಮಸ್ಯೆ ಪರಿಹಾರಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು;

(ಈ) ಬೆಳೆ ಹಾನಿ ಸಹಾಯ ಧನಗಳನ್ನು ಸರಿಯಾಗಿ ರೈತರ ಖಾತೆಗಳಿಗೆ ಜಮಾ ಪಾವತಿಯಾಗದೇ ಅನ್ಯ ರಾಜ್ಯದ ರೈತರ ಖಾತೆಗೆ ಜಮಾ ಆಗಿರುವುದು ನಿಜವೇ;

(ಉ) ಕೇಂದ್ರ ಮತ್ತು ರಾಜ್ಯದಿಂದ ಬೆಳೆ ಹಾನಿ (ಬರ ಪರಿಹಾರ) ಸಹಾಯಧನವಾಗಿ ಒಟ್ಟು ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ; ಒಟ್ಟು ಎಷ್ಟು ಮಂದಿ ರೈತರಿಗೆ ಪರಿಹಾರ ಜಮಾ ಮಾಡಲಾಗಿದೆ; ಪಾವತಿಗೆ ಬಾಕಿಯಿರುವ ಮೊತ್ತವೆಷ್ಟು; (ಹಾವೇರಿಯ ಸಂಪೂರ್ಣ ವಿವರ ನೀಡುವುದು)

(ಊ) ರೈತರಿಗೆ ನೇರವಾಗಿ ಅವರ ಖಾತೆಗೆ ಸಂಪೂರ್ಣ ಬರ ಪರಿಹಾರ ಸಹಾಯಧನ ಪಾವತಿಸುವ ಬಗ್ಗೆ ಮೃತ ರೈತರ ಕುಟುಂಬಕ್ಕೆ ಶೀಘ್ರವಾಗಿ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ಸಂಪೂರ್ಣ ವಿವರ ಒದಗಿಸುವುದು)

## ರಾಜ್ಯದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತರು ಹಾಗೂ ಇತರೆ ವರ್ಗದ ರೈತರಿಗೆ ಕೊರೆದ ಕೊಳವೆ ಬಾವಿಗಳ ಬಗ್ಗೆ

**ಶ್ರೀ ಸೋಮಣ್ಣ ಮ ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು)–**

೮೫೧ (೯೩೬) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯದಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಪರಿಶಿಷ್ಠ ಜಾತಿ/ ಪರಿಶಿಷ್ಠ ಪಂಗಡ, ಅಲ್ಪಸಂಖ್ಯಾತರ ಮತ್ತು ಇತರೆ ವರ್ಗಗಳ ದೊಡ್ಡ ರೈತರಿಗೆ, ಮಧ್ಯಮ ರೈತರಿಗೆ, ಸಣ್ಣ ರೈತರಿಗೆ ಹಾಗೂ ಅತಿ ಸಣ್ಣ ರೈತರಿಗೆ ಕೊರೆದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು; ಇದಕ್ಕೆ ಕೇಸಿಂಗ್ ಪೈಪ್ ಹಾಕಿದ ಕೊಳವೆ ಬಾವಿಗಳು ಎಷ್ಟು; ಪಂಪ್‌ಸೆಟ್ ಹಾಕಿದ ಕೊಳವೆ ಬಾವಿಗಳು ಎಷ್ಟು; ವಿದ್ಯುತ್ ಸಂಪರ್ಕ ಪಡೆದ ಕೊಳವೆ ಬಾವಿಗಳು ಎಷ್ಟು;

(ಆ) ಇದರಲ್ಲಿ ಪಂಪ್‌ಸೆಟ್ ಹಾಕದೆ ಇರುವ, ಕೇಸಿಂಗ್ ಹಾಕದೆ ಇರುವ ಹಾಗೂ ವಿದ್ಯುತ್ ಸಂಪರ್ಕ ಕೊಡದೆ ಬಾಕಿ ಇರುವ ಕೊಳವೆ ಬಾವಿಗಳೆಷ್ಟು; (ಜಿಲ್ಲಾವಾರು, ತಾಲ್ಲೂಕುವಾರು ಸಂಪೂರ್ಣ ಮಾಹಿತಿ ಒದಗಿಸುವುದು)

(ಇ) ಪ್ರತಿಯೊಂದು ಕೊಳವೆ ಬಾವಿಗೆ ತಗುಲಿದ ವೆಚ್ಚ ಎಷ್ಟು; ಈ ಕೊಳವೆ ಬಾವಿಗೆ ಹಾಕಿದ ಕೇಸಿಂಗ್ ಯಾವ ಕಂಪನಿಯದು; ಅದರ ಹೆಸರೇನು ಮತ್ತು ಕೊಳವೆ ಬಾವಿಗಳಿಗೆ ಹಾಕಿದ ಪಂಪ್‌ಸೆಟ್ ಹೆಸರೇನು; ಅದು ಎಷ್ಟು ಹೆಚ್‌ಪಿಯದು ಮತ್ತು ಪಂಪ್‌ಸೆಟ್‌ಗೆ ಜೋಡಿಸಿದ ಪೈಪು ಯಾವ ಕಂಪನಿಯದು? (೨೦೧೧ ರಿಂದ ೨೦೧೬ ನವೆಂಬರ್‌ವರೆಗೆ ಹಾವೇರಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳು ಹಾಗೂ ಫಲಾನುಭವಿಗಳ ಹೆಸರುಗಳೊಂದಿಗೆ ಸಂಪೂರ್ಣ ಮಾಹಿತಿ ಒದಗಿಸುವುದು)

## ಹಾವೇರಿ ಜಿಲ್ಲೆಯ ಶಿಗ್ಗಾಂವ ತಾಲ್ಲೂಕಿನಲ್ಲಿ ಕಾಡು ಪ್ರಾಣಿಗಳ ಹಾವಳಿ ಬಗ್ಗೆ

**ಶ್ರೀ ಸೋಮಣ್ಣ ಮ ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು)–**

೮೫೨ (೯೩೭) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾವೇರಿ ಜಿಲ್ಲೆಯ ಶಿಗ್ಗಾಂವ ತಾಲ್ಲೂಕಿನ ಮಲೆನಾಡು ಭಾಗದ ಹಳ್ಳಿಗಳ ಸುತ್ತಮುತ್ತ ಇತ್ತೀಚಿನ ದಿನಗಳಲ್ಲಿ ಕಾಡು ಪ್ರಾಣಿಗಳ ಹಾವಳಿ ಜಾಸ್ತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಈ ಕಾಡು ಪ್ರಾಣಿಗಳ ದಾಳಿಯಿಂದ ಆದ ಬೆಳೆ ಹಾನಿ ಹಾಗೂ ಪ್ರಾಣ ಹಾನಿ ಎಷ್ಟು; ಆದ ನಷ್ಟಕ್ಕೆ ಸಂತ್ರಸ್ಥರ ಕುಟುಂಬಕ್ಕೆ ನೀಡಲಾದ ಪರಿಹಾರ ಮೊತ್ತ ಎಷ್ಟು; (ವಿವರ ನೀಡುವುದು)

(ಇ) ಕಾಡು ಪ್ರಾಣಿಗಳ ಹಾವಳಿ ತಡೆಯುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ಸಂಪೂರ್ಣ ವಿವರ ನೀಡುವುದು)

## ರಾಜ್ಯದಲ್ಲಿ ಬೇಡಜಂಗಮ ಕುಟುಂಬಗಳ ಬಗ್ಗೆ

**ಶ್ರೀ ಸೋಮಣ್ಣ ಮ ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು)–**

೮೫೩ (೯೩೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಬೇಡಜಂಗಮ ಕುಟುಂಬಗಳ ಸಂಖ್ಯೆ ಎಷ್ಟು; ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಕುಟುಂಬಗಳಿವೆ; (ಜಿಲ್ಲಾವಾರು ತಾಲ್ಲೂಕುವಾರು ಮಾಹಿತಿ ಒದಗಿಸುವುದು)

(ಆ) ಈ ಬೇಡಜಂಗಮ ಕುಟುಂಬಗಳಿಗೆ ಸರ್ಕಾರದಿಂದ ಯಾವ ಯಾವ ಸೌಲಭ್ಯಗಳನ್ನು ಒದಗಿಸಲಾಗಿದೆ;

(ಇ) ಬೇರೆ ಬೇರೆ ರಾಜ್ಯಗಳಲ್ಲಿ ಬೇಡಜಂಗಮ ಜನಾಂಗದವರಿಗೆ ಮೀಸಲಾತಿ ಸೌಲಭ್ಯ ಒದಗಿಸಲಾಗಿದೆಯೇ; ಹಾಗಿದ್ದಲ್ಲಿ, ರಾಜ್ಯದಲ್ಲಿ ಬೇಡಜಂಗಮದವರಿಗೆ ಮೀಸಲಾತಿ ಪ್ರಮಾಣ ಪತ್ರ ನೀಡಲಾಗಿದೆಯೇ; ಯಾವ ಯಾವ ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕುಗಳಲ್ಲಿ ಯಾರ್ಯಾರಿಗೆ ಒದಗಿಸಲಾಗಿದೆ; (ಊರು, ತಾಲ್ಲೂಕು, ಹೆಸರುಗಳೊಂದಿಗೆ ವಿವರ ಒದಗಿಸುವುದು)

(ಈ) ಬೇಡಜಂಗಮರಿಗೆ ಪರಿಶಿಷ್ಠ ಜಾತಿ ಪ್ರಮಾಣ ಪತ್ರ ಪಡೆಯಲು ಮಾನದಂಡನೆಗಳೇನು?

## ಹಾವೇರಿ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯಿಂದ ಬಂದ ಅನುದಾನದ ಬಗ್ಗೆ

**ಶ್ರೀ ಸೋಮಣ್ಣ ಮ ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು)–**

೮೫೪ (೯೩೯) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅರಣ್ಯ ಇಲಾಖೆಯಿಂದ ಕಳೆದ ಮೂರು ವರ್ಷಗಳಿಂದ ವಿವಿಧ ಯೋಜನೆಗಳ ಅಡಿಯಲ್ಲಿ ಬಂದ ಅನುದಾನವೆಷ್ಟು; ಖರ್ಚಾದ ಅನುದಾನವೆಷ್ಟು; (ಯೋಜನಾವಾರು, ಹಾವೇರಿ ಜಿಲ್ಲೆಯ ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ೨೦೧೬–೨೦೧೭ನೇ ಸಾಲಿನಲ್ಲಿ ಹಾವೇರಿ ಜಿಲ್ಲೆಯಲ್ಲಿ ಶಾಲಾ, ಕಾಲೇಜು ಹಾಗೂ ಸರ್ಕಾರಿ ಕಛೇರಿಗಳ ಆವರಣದಲ್ಲಿ ಗುಡ್ಡಗಾಡು ಪ್ರದೇಶಗಳಲ್ಲಿ ಸಸಿಗಳನ್ನು ನೆಡಲು ಸರ್ಕಾರ ಹಾಕಿಕೊಂಡಿರುವ ಕ್ರಮಗಳೇನು?

## ರಾಜ್ಯದ ಖಾಸಗಿ ಅನುದಾನಿತ ಐಟಿಐ ಶಿಕ್ಷಣ ಸಂಸ್ಥೆಗಳ ಬೋಧನಾ ಶುಲ್ಕದ ಕುರಿತು

**ಶ್ರೀ ಎಸ್.ವಿ. ಸಂಕನೂರ (ಪದವೀಧರರ ಕ್ಷೇತ್ರ)–**

೮೫೫ (೧೦೪೭) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಖಾಸಗಿ ಅನುದಾನಿತ ಐಟಿಐ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಂದ ೨೦೧೬–೧೭ನೇ ಸಾಲಿನಲ್ಲಿ ಬೋಧನಾ ಶುಲ್ಕವನ್ನು ಸರ್ಕಾರಕ್ಕೆ ಜಮಾ ಮಾಡಬೇಕೆಂದು ಇಲಾಖೆ ಆದೇಶ ಹೊರಡಿಸಿರುವುದು ನಿಜವೇ;

(ಆ) ಸಂಬಂಧಪಟ್ಟ ಆಡಳಿತ ಮಂಡಳಿಯವರು ಸರ್ಕಾರಕ್ಕೆ ಭರಣ ಮಾಡಿದ ನಂತರವೇ ಸಹಾಯ ಅನುದಾನವನ್ನು ಬಿಡುಗಡೆ ಮಾಡುವುದಾಗಿ ತಿಳಿಸಿದ್ದು ನಿಜವೇ?

## ಕೆ.ಎಚ್. ಪಾಟೀಲ್ ಜಿಲ್ಲಾ ಕ್ರೀಡಾಂಗಣ, ಗದಗ, ಇದರ ಕುರಿತು

**ಶ್ರೀ ಎಸ್.ವಿ. ಸಂಕನೂರ (ಪದವೀಧರರ ಕ್ಷೇತ್ರ) –**

೮೫೬ (೧೦೪೮) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೆ.ಎಚ್. ಪಾಟೀಲ್ ಗದಗ ಜಿಲ್ಲಾ ಕ್ರೀಡಾಂಗಣದಲ್ಲಿ "ಸಿಂಥೆಟಿಕ್ ಟ್ರಾಕ್" ಇದ್ದು, ಇದಕ್ಕೆ ಸಂಬಂಧಿಸಿದ "ಅಥ್ಲೆಟಿಕ್" ತರಬೇತಿದಾರರು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ತರಬೇತಿದಾರರನ್ನು ಯಾವಾಗ ನೇಮಕ ಮಾಡಿಕೊಳ್ಳಲಾಗುವುದು;

(ಆ) ಅದೇ ರೀತಿ ಗದಗ ಜಿಲ್ಲಾ ಕ್ರೀಡಾಂಗಣಕ್ಕೆ "ಜಿಮ್" ಉಪಕರಣ ಒದಗಿಸಿದ್ದು, ಅದು ರಿಪೇರಿಗೆ ಬಂದಿದ್ದು ನಿಜವೇ; ಮತ್ತು ಇದಕ್ಕೆ ಸಂಬಂಧಿಸಿದ ತರಬೇತಿದಾರರು ಕೂಡಾ ಇರದೇ ಇರುವುದು ನಿಜವೇ; ಹಾಗಿದ್ದಲ್ಲಿ, ಯಾವಾಗ ರಿಪೇರಿ ಮಾಡಿಸಲಾಗುವುದು, ಮತ್ತು ಸಂಬಂಧಪಟ್ಟ "ಕೋಚ್"ನ್ನು ಯಾವಾಗ ನೇಮಿಸಲಾಗುವುದು?

## ವಾಡಿಕೆ ಮಳೆಯಲ್ಲಿ ಕೊರತೆ ಮತ್ತು ಬರಪೀಡಿತ ಪ್ರದೇಶಗಳು

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) –**

೮೫೭ (೯೬೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ೧೭೬ ತಾಲ್ಲೂಕುಗಳಲ್ಲಿ ಆಗಬೇಕಾಗಿದ್ದ ವಾಡಿಕೆ ಮಳೆಯ ಪ್ರಮಾಣವೆಷ್ಟು;

(ಆ) ಪ್ರಸಕ್ತ ವರ್ಷದಲ್ಲಿ ಯಾವ ಯಾವ ತಾಲ್ಲೂಕಿನಲ್ಲಿ ವಾಡಿಕೆ ಮಳೆಗಿಂತ ಕಡಿಮೆ ಪ್ರಮಾಣದ ಮಳೆ ಆಗಿದೆ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಈ ಕಡಿಮೆ ಪ್ರಮಾಣದ ಮಳೆಯಿಂದ ರೈತರಿಗೆ ಹಾಗೂ ಇನ್ನಿತರರಿಗೆ ಸಂಭವಿಸಿದ ನಷ್ಟವೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಈ) ರಾಜ್ಯದ ಯಾವ ಯಾವ ತಾಲ್ಲೂಕುಗಳನ್ನು "ಬರಪೀಡಿತ" ಎಂದು ಘೋಷಿಸಲಾಗಿದೆ;

(ಉ) "ಬರಪೀಡಿತ ತಾಲ್ಲೂಕುಗಳು" ಎಂದು ಘೋಷಿಸಲು ಅನುಸರಿಸುವ ಮಾನದಂಡಗಳಾವುವು;

(ಊ) ಬರಪೀಡಿತ ತಾಲ್ಲೂಕುಗಳ ಜನ–ಜಾನುವಾರುಗಳ ಸಂಕಷ್ಟ ಪರಿಹಾರಕ್ಕೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ನಿರ್ವಹಿಸಬೇಕಾದ ಜವಾಬ್ದಾರಿಗಳು ಏನು ಮತ್ತು ಅವು ಯಾವುವು;

(ಋ) ಅವುಗಳನ್ನು ನಿಭಾಯಿಸಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಒದಗಿಸಿರುವ ಅನುದಾನ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)

## ಕಪ್ಪತ್ತಗುಡ್ಡ ಸಂರಕ್ಷಿತ ಅರಣ್ಯ ಪ್ರದೇಶ ಮತ್ತು ಪಾರಂಪರಿಕ ಔಷಧ ಗಿಡಮೂಲಿಕೆಗಳು

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) –**

೮೫೮ (೮೯೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗದಗ ಜಿಲ್ಲೆಯಲ್ಲಿರುವ ಕಪ್ಪತ್ತಗುಡ್ಡ ಸಂರಕ್ಷಿತ ಅರಣ್ಯ ಪ್ರದೇಶದ ವಿಸ್ತೀರ್ಣವೆಷ್ಟು;

(ಆ) ಈ ಅರಣ್ಯ ಪ್ರದೇಶದಲ್ಲಿ ಯಾವುದಾದರೂ ಪ್ರದೇಶವನ್ನು ಯಾರಾದರೂ ಒತ್ತುವರಿ ಅಥವಾ ಅತಿಕ್ರಮಣ ಮಾಡಿಕೊಂಡಿದ್ದಾರೆಯೇ;

(ಇ) ಮಾಡಿಕೊಂಡಿದ್ದಲ್ಲಿ, ಯಾರಿಂದ ಒತ್ತುವರಿ ಅಥವಾ ಅತಿಕ್ರಮಣವಾಗಿದೆ; (ವಿವರ ನೀಡುವುದು) ಅದನ್ನು ತೆರವುಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

(ಈ) ಕಪ್ಪತ್ತಗುಡ್ಡ ಪ್ರದೇಶದಲ್ಲಿ ಲಭ್ಯವಾಗುವ ಪಾರಂಪರಿಕ ಔಷಧಿ ಗಿಡಮೂಲಿಕೆಗಳು ಯಾವುವು; ಎಷ್ಟು ವಿಸ್ತೀರ್ಣ ಪ್ರದೇಶದಲ್ಲಿ ಎಷ್ಟು ಪ್ರಮಾಣದ ಗಿಡಮೂಲಿಕೆಗಳನ್ನು ಬೆಳೆಸಲಾಗಿದೆ;

(ಉ) ಅವುಗಳ ಸಂರಕ್ಷಣೆ, ಪಾಲನೆ ಮತ್ತು ಪೋಷಣೆಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

## ಮಹದಾಯಿ ನದಿ ಪಾತ್ರದ ವಿಸ್ತೀರ್ಣ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) –**

೮೫೯ (೮೯೩) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಹದಾಯಿ ನದಿ ಪಾತ್ರದ ವಿಸ್ತೀರ್ಣವೆಷ್ಟು; ಅದರಲ್ಲಿ ಕರ್ನಾಟಕ, ಮಹಾರಾಷ್ಟ್ರ ಹಾಗೂ ಗೋವಾ ರಾಜ್ಯಗಳಿಗೆ ಸೇರಿದ ವಿಸ್ತೀರ್ಣ ಪ್ರದೇಶವೆಷ್ಟು; (ರಾಜ್ಯವಾರು ವಿವರ ನೀಡುವುದು)

(ಆ) ಈ ರಾಜ್ಯವಾರು ಪ್ರದೇಶಗಳಲ್ಲಿ ವಾಡಿಕೆ ಮಳೆಯಂತೆ ಪ್ರತಿ ವರ್ಷ ಲಭ್ಯವಾಗುವ ನೀರಿನ ಪ್ರಮಾಣ ಎಷ್ಟು;

(ಇ) ಕಳಸಾ ಬಂಡೂರಿಯ ಎಷ್ಟು ಪ್ರಮಾಣದ ನೀರನ್ನು ಕುಡಿಯುವ ನೀರಿನ ಉದ್ದೇಶಕ್ಕಾಗಿ ಹಾಗೂ ಕೃಷಿ ಮತ್ತು ಇನ್ನಿತರೆ ಬಾಬ್ತುಗಳಿಗೆ ಉಪಯೋಗಿಸಿಕೊಳ್ಳಲು ಸರ್ಕಾರ ಉದ್ದೇಶಿಸಿದೆ; (ವಿವರ ನೀಡುವುದು)

(ಈ) ಈ ಉದ್ದೇಶವನ್ನು ಕಾರ್ಯಗತಗೊಳಿಸಲು ಸರ್ಕಾರ ಇಲ್ಲಿಯವರೆಗೂ ಕೈಗೊಂಡಿರುವ ಯೋಜನೆಗಳು ಮತ್ತು ಪ್ರಯತ್ನಗಳು ಯಾವುವು; (ವಿವರಗಳನ್ನು ನೀಡುವುದು)

(ಉ) ಆ ಪ್ರಯತ್ನಗಳು ಮತ್ತು ಉದ್ದೇಶಗಳು ಕಾರ್ಯರೂಪಕ್ಕೆ ಬರದಿರಲು ಕಾರಣಗಳೇನು?

## ಬರ ಪರಿಹಾರ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೮೬೦ (೯೭೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಭೀಕರ ಬರಗಾಲ ಆಗಿರುವುದರಿಂದ ಎಷ್ಟು ತಾಲ್ಲೂಕುಗಳನ್ನು ಬರ ಪೀಡಿತ ಪ್ರದೇಶವೆಂದು ಘೋಷಿಸಲಾಗಿದೆ; (ಜಿಲ್ಲಾ ಹಾಗೂ ತಾಲ್ಲೂಕುವಾರು ಮಾಹಿತಿ ಒದಗಿಸುವುದು)

(ಆ) ಮಳೆಯ ಕೊರತೆಯಿಂದಾಗಿ ರೈತರು ಹಾಗೂ ಜಾನುವಾರುಗಳು ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಹಾಗಿದ್ದಲ್ಲಿ, ಬರ ಪರಿಹಾರವನ್ನು ಸಮರೋಪಾದಿಯಲ್ಲಿ ನಿರ್ವಹಿಸಲು ತೆಗೆದುಕೊಂಡ ಕ್ರಮಗಳೇನು;

(ಈ) ಬರದಿಂದಾಗಿ ಪ್ರತಿ ಎಕರೆಗೆ ನಿಗದಿಪಡಿಸಿರುವ ಪರಿಹಾರ ಎಷ್ಟು;

(ಉ) ಇದುವರೆವಿಗೂ ಬರ ಪರಿಹಾರಕ್ಕೆ ಬಿಡುಗಡೆ ಮಾಡಲಾದ ಹಣ ಎಷ್ಟು; ಬಾಕಿ ಹಣವೆಷ್ಟು; ಸಂಪೂರ್ಣ ಮಾಹಿತಿ ಒದಗಿಸುವುದು?

## ಪೋಡಿ ನಿರ್ವಹಣೆ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೮೬೧ (೯೦೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೪–೧೫, ೨೦೧೫–೧೬ ಮತ್ತು ೨೦೧೬–೧೭ನೇ ಸಾಲಿನಲ್ಲಿ ಜಮೀನನ್ನು ಪೋಡಿ ಮಾಡಲು ಕೋರಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು;

(ಆ) ವಿಲೇವಾರಿಯಾದ ಅರ್ಜಿಗಳ ಸಂಖ್ಯೆ ಎಷ್ಟು; ಬಾಕಿ ಉಳಿದಿರುವ ಅರ್ಜೀಗಳ ಸಂಖ್ಯೆ ಎಷ್ಟು;

(ಇ) ಅರ್ಜಿಗಳಲ್ಲಿ ಕಳೆದ ೩ ವರ್ಷಗಳಿಂದ ವಿಲೇವಾರಿಯಾಗದೆ ಬಾಕಿ ಉಳಿದಿರುವ ಅರ್ಜಿಗಳ ಸಂಖ್ಯೆ ಎಷ್ಟು; ವಿಳಂಬಕ್ಕೆ ಕಾರಣಗಳೇನು?

## ವಿವಿಧ ಯೋಜನೆಗಳ ಅಡಿಯಲ್ಲಿ ಸೌಲಭ್ಯಗಳ ಮಂಜೂರಾತಿ ಬಗ್ಗೆ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೮೬೨ (೯೧೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಂಧ್ಯಾ ಸುರಕ್ಷಾ, ಮನಸ್ವಿನಿ, ವಿಧವಾ ವೇತನ, ವೃದ್ಧಾಪ್ಯ ವೇತನ ಮುಂತಾದ ಯೋಜನೆ ಅಡಿಯಲ್ಲಿ ಇರುವ ಒಟ್ಟು ಫಲಾನುಭವಿಗಳ ಸಂಖ್ಯೆ ಎಷ್ಟು; ಪ್ರತ್ಯೇಕವಾಗಿ ವಿವರ ನೀಡುವುದು;

(ಆ) ಈ ಯೋಜನೆಗಳಿಗೆ ಸರ್ಕಾರ ಖರ್ಚು ಮಾಡುತ್ತಿರುವ ಹಣ ಎಷ್ಟು;

(ಇ) ಈ ಸೌಲಭ್ಯಗಳ ಅಡಿಯಲ್ಲಿ ಫಲಾನುಭವಿಗಳನ್ನು ಗುರುತಿಸಲು ಇರುವ ಮಾನದಂಡಗಳೇನು;

(ಈ) ಫಲಾನುಭವಿಗಳಿಗೆ ನೀಡಲಾಗುವ ಸೌಲಭ್ಯದ ಮೊತ್ತವನ್ನು ನೇರವಾಗಿ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುತ್ತಿದೆಯೇ; ಅಲ್ಲದೆ ಫಲಾನುಭವಿಗಳಿಗೆ ಮಾಹಿತಿ ನೀಡಲಾಗಿದೆಯೇ;

(ಉ) ಈ ಒಟ್ಟು ಫಲಾನುಭವಿಗಳ ಸಂಖ್ಯೆಯಲ್ಲಿ ಎಷ್ಟು ಮಂದಿಗೆ ಸೌಲಭ್ಯ ರದ್ದಾಗಿದೆ; ಎಷ್ಟು ಮಂದಿಗೆ ನೀಡಲಾಗುತ್ತಿದೆ; ರದ್ದುಪಡಿಸಲು ಇರುವ ಮಾನದಂಡ ಏನು?

## ಬೀದರ್ ಜಿಲ್ಲೆಯಲ್ಲಿ ಸ್ಮಶಾನ ಭೂಮಿಯ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೬೩ (೧೦೫೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿ ಪ್ರತಿಯೊಂದು ಸಮುದಾಯದವರಿಗೆ ಸ್ಮಶಾನ ಭೂಮಿಯನ್ನು ಮಂಜೂರ ಮಾಡಲಾಗಿದೆಯೇ; ಮಾಡಿದ್ದಲ್ಲಿ, ಎಷ್ಟು ಜಮೀನನ್ನು ಮಂಜೂರು ಮಾಡಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಬೀದರ್ ಜಿಲ್ಲೆ, ಬಸವ ಕಲ್ಯಾಣ ತಾಲ್ಲೂಕಿನಲ್ಲಿ ಮುಸ್ಲಿಂ ಸಮುದಾಯಕ್ಕೆ ನೀಡಿರುವ ಸ್ಮಶಾನ ಭೂಮಿಯ ವಿಸ್ತೀರ್ಣವೆಷ್ಟು? (ವಿವರ ನೀಡುವುದು)

## ಬೀದರ್ ಮಿನಿ ವಿಧಾನಸೌಧ ನಿರ್ಮಾಣದ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೬೪ (೧೦೪೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಮಿನಿ ವಿಧಾನಸೌಧ ನಿರ್ಮಾಣದ ಪ್ರಸ್ತಾವನೆ ಯಾವ ಹಂತದಲ್ಲಿದೆ; ಸ್ಥಳ ಗುರುತಿಸಲಾಗಿದೆಯೇ; (ಮಾಹಿತಿ ನೀಡುವುದು)

(ಆ) ಬೀದರ್ ಜಿಲ್ಲಾ ಕೇಂದ್ರದಲ್ಲಿ ನೂತನ ಜಿಲ್ಲಾ ಆಡಳಿತ ಸಂಕೀರ್ಣ ನಿರ್ಮಾಣಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

(ಇ) ಬೀದರ್ ಜಿಲ್ಲಾ ಕೇಂದ್ರದಲ್ಲಿ ನೂತನ ಜಿಲ್ಲಾ ಆಡಳಿತ ಸಂಕೀರ್ಣಕ್ಕೆ ಸ್ಥಳ ಗುರುತಿಸಲಾಗಿದೆಯೇ; ಗುರುತಿಸಿದ್ದಲ್ಲಿ, ಸದರಿ ಸ್ಥಳದ ಮಾಹಿತಿ, ವಿಸ್ತೀರ್ಣದ ವಿವರ ನೀಡುವುದು;

(ಈ) ಬೀದರ್ ಜಿಲ್ಲಾ ಕೇಂದ್ರದಲ್ಲಿ ನೂತನ ಜಿಲ್ಲಾ ಆಡಳಿತ ಸಂಕೀರ್ಣ ನಿರ್ಮಾಣಕ್ಕೆ ಅಗತ್ಯವಿರುವ ಜಮೀನು ಎಷ್ಟು; ಇದಕ್ಕಾಗಿ ಸರ್ಕಾರಿ ಜಮೀನು ಲಭ್ಯವಿದೆಯೇ? (ವಿವರ ನೀಡುವುದು)

## ಹೈದರಾಬಾದ್–ಕರ್ನಾಟಕ ಭಾಗದಲ್ಲಿ ರಾಜ್ಯ ಮಟ್ಟದ ಕ್ರೀಡಾ ಕೂಟಗಳ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೬೫ (೧೦೫೦) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೈದರಾಬಾದ್–ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಕಳೆದ ೩ ವರ್ಷಗಳಲ್ಲಿ ಎಷ್ಟು ರಾಜ್ಯ ಮಟ್ಟದ ಕ್ರೀಡಾ ಕೂಟಗಳನ್ನು ಆಯೋಜಿಸಲಾಗಿದೆ;

(ಆ) ಹೈದರಾಬಾದ್–ಕರ್ನಾಟಕ ಭಾಗದ ಎಷ್ಟು ಜನ ಕ್ರೀಡಾಪಟುಗಳನ್ನು ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಕ್ರೀಡೆಗಳಿಗೆ ಆಯ್ಕೆ ಮಾಡಲಾಗಿದೆ;

(ಇ) ಹೈದರಾಬಾದ್–ಕರ್ನಾಟಕ ಭಾಗದ ಪ್ರತಿಭಾನ್ವಿತ ಕ್ರೀಡಾಪಟುಗಳನ್ನು ನಿರ್ಲಕ್ಷಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಹೈದರಾಬಾದ್–ಕರ್ನಾಟಕದ ೬ ಜಿಲ್ಲೆಗಳಿಗೆ ಎಷ್ಟು ರಾಜ್ಯ ಮಟ್ಟದ ಕ್ರೀಡಾಂಗಣಗಳನ್ನು ನಿರ್ಮಾಣ ಮಾಡಲಾಗಿದೆ? (ವಿವರ ನೀಡುವುದು)

## ಬೀದರ್ ಜಿಲ್ಲೆಯ ATI ತರಬೇತಿ ಕೇಂದ್ರ ಸ್ಥಾಪನೆ ಮಾಡುವ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೬೬ (೧೦೫೨) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿ ATI ತರಬೇತಿ ಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಈ ತರಬೇತಿ ಕೇಂದ್ರವನ್ನು ಯಾವಾಗಿನಿಂದ ಪ್ರಾರಂಭ ಮಾಡಲಾಗುವುದು;

(ಆ) ಬೀದರ್ ಜಿಲ್ಲೆಯ ITI ಕಾಲೇಜುಗಳಲ್ಲಿ ಖಾಲಿ ಇರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಇ) ಬೀದರ್ ಜಿಲ್ಲೆ, ಹುಮ್ನಾಬಾದ್ ತಾಲ್ಲೂಕಿನಲ್ಲಿ ITI ಕಾಲೇಜು ಕಟ್ಟಡ ಕಾಮಗಾರಿ ಯಾವ ಹಂತದಲ್ಲಿದೆ; ಈ ಕಾಲೇಜಿಗೆ ಬಿಡುಗಡೆಯಾಗಿರುವ ಅನುದಾನ ಎಷ್ಟು? (ವಿವರ ನೀಡುವುದು)

## ಸರ್ಕಾರಿ ಭೂಮಿ ಒತ್ತುವರಿ ಬಗ್ಗೆ

**ಶ್ರೀಮತಿ ವಿಮಲಗೌಡ (ವಿಧಾನಸಭೆಯಿಂದ ಚುನಾಯಿತರಾದವರು) –**

೮೬೭ (೧೧೩೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಒತ್ತುವರಿಯಾದ ಸರ್ಕಾರಿ ಭೂಮಿಯ ಪ್ರಮಾಣವೆಷ್ಟು; (ಕ್ಷೇತ್ರವಾರು ಮಾಹಿತಿ ನೀಡುವುದು)

(ಆ) ಇದರಲ್ಲಿ ಸರ್ಕಾರದ ವಶಕ್ಕೆ ಪಡೆದ ಭೂಮಿಯ ಪ್ರಮಾಣವೆಷ್ಟು; ಇನ್ನೂ ವಶಕ್ಕೆ ಪಡೆಯಬೇಕಾದ ಸರ್ಕಾರಿ ಭೂಮಿಯೆಷ್ಟು;

(ಇ) ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ರಾಜಕಾಲುವೆಗಳು ಒತ್ತುವರಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಹಾಗಿದ್ದಲ್ಲಿ, ಇದುವರೆವಿಗೂ ಎಷ್ಟು ವಿಸ್ತೀರ್ಣದ ರಾಜಕಾಲುವೆಯ ಒತ್ತುವರಿಯನ್ನು ತೆರವುಗೊಳಿಸಲಾಗಿದೆ;

(ಉ) ಇನ್ನು ತೆರವುಗೊಳಿಸಬೇಕಾಗಿರುವ ರಾಜಕಾಲುವೆಯ ವಿಸ್ತೀರ್ಣವೆಷ್ಟು? (ಕ್ಷೇತ್ರವಾರು, ಸರ್ವೇ ನಂಬರ್ ಸಮೇತ ಪೂರ್ಣ ವಿವರ ನೀಡುವುದು)

## ಬರ ನಿರ್ವಹಣೆಗೆ ಅನುದಾನ ಮೊತ್ತ ಬಿಡುಗಡೆ ಮಾಡುವ ಬಗ್ಗೆ

**ಶ್ರೀ ಸಯದ್ ಮುಧೀರ್ ಆಗಾ (ವಿಧಾನಸಭೆಯಿಂದ ಚುನಾಯಿತರಾದವರು)–**

೮೬೮ (೯೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಭೀಕರ ಬರಗಾಲ ತಲೆದೋರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಬರಗಾಲ ನಿರ್ವಹಣೆಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜನವರಿ ೨೦೧೬ ರಿಂದ ಇಲ್ಲಿವರೆವಿಗೂ ಬಿಡುಗಡೆ ಮಾಡಿರುವ ಅನುದಾನದ ಮೊತ್ತವೆಷ್ಟು; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಇ) ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಿಡುಗಡೆ ಮಾಡಿದ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳಲಾಗಿದೆಯೇ;

(ಈ) ರಾಮನಗರ ಮತ್ತು ಚಾಮರಾಜನಗರ ಜಿಲ್ಲೆಗಳಿಗೆ ಬಿಡುಗಡೆಯಾಗಿರುವ ಅನುದಾನದಲ್ಲಿ ಯಾವ ಯಾವ ಕಾರ್ಯಗಳನ್ನು ಕೈಗೊಳ್ಳಲಾಗಿದೆ; (ವಿವರಗಳನ್ನು ನೀಡುವುದು)

(ಉ) ಬರ ನಿರ್ವಹಣೆಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಿಡುಗಡೆ ಮಾಡಿದ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳುವಲ್ಲಿ ವಿಫಲರಾದ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

## ಅಕ್ರಮ–ಸಕ್ರಮದ ಬಗ್ಗೆ

**ಶ್ರೀ ಸಯದ್ ಮುಧೀರ್ ಆಗಾ (ವಿಧಾನಸಭೆಯಿಂದ ಚುನಾಯಿತರಾದವರು)–**

೮೬ (೮೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಭೂ ಕಂದಾಯ ಅಧಿನಿಯಮ, ೯೪ಸಿ ಕಾಯ್ದೆ, ೧೯೬೪ರ ಅಡಿಯಲ್ಲಿ ಸರ್ಕಾರಕ್ಕೆ ಸೇರಿದ ಭೂಮಿಯಲ್ಲಿ ಅನಧಿಕೃತವಾಗಿ ನಿರ್ಮಿಸಿಕೊಂಡಿರುವ ಮನೆ/ಕಟ್ಟಡಗಳನ್ನು ಸಕ್ರಮಗೊಳಿಸುವ ಸಂಬಂಧ ಇದುವರೆವಿಗೂ ಸಲ್ಲಿಕೆಯಾದ ಅರ್ಜಿಗಳೆಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಆ) ರಾಮನಗರ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಇಂತಹ ಎಷ್ಟು ಅರ್ಜಿಗಳು ಸಲ್ಲಿಕೆಯಾಗಿವೆ; ಎಷ್ಟು ಅರ್ಜಿಗಳನ್ನು ಮಾನ್ಯ ಮಾಡಿ ಸಕ್ರಮಗೊಳಿಸಲಾಗಿದೆ; ಎಷ್ಟು ಅರ್ಜಿಗಳನ್ನು ಬಾಕಿ ಉಳಿಸಿಕೊಳ್ಳಲಾಗಿದೆ; ಬಾಕಿ ಉಳಿಯಲು ಕಾರಣಗಳೇನು? (ವಿಧಾನಸಭಾ ಕ್ಷೇತ್ರಗಳವಾರು ಮಾಹಿತಿ ನೀಡುವುದು)

## ರಾಜ್ಯದಲ್ಲಿ ಬರ ಪೀಡಿತ ಪ್ರದೇಶಗಳ ಬಗ್ಗೆ

**ಶ್ರೀ ಸಯದ್ ಮುಧೀರ್ ಆಗಾ (ವಿಧಾನಸಭೆಯಿಂದ ಚುನಾಯಿತರಾದವರು)–**

೮೭೦ (೮೯೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಬರ ಪೀಡಿತ ತಾಲ್ಲೂಕುಗಳೆಂದು ಇದುವರೆವಿಗೂ ಎಷ್ಟು ತಾಲ್ಲೂಕುಗಳನ್ನು ಸರ್ಕಾರ ಘೋಷಿಸಿದೆ; (ಮಾಹಿತಿ ನೀಡುವುದು)

(ಆ) ಹಾಗಿದ್ದಲ್ಲಿ, ಬರ ಪೀಡಿತ ತಾಲ್ಲೂಕುಗಳಲ್ಲಿ ಗ್ರಾಮೀಣ ಪ್ರದೇಶಗಳ ಕುಡಿಯುವ ನೀರು ಮತ್ತು ಜಾನುವಾರುಗಳಿಗೆ ಮೇವಿನ ಕೊರತೆ ನೀಗಿಸಲು ಯಾವ ಯಾವ ಕ್ರಮ ಕೈಗೊಳ್ಳಲಾಗಿದೆ; (ಮಾಹಿತಿ ನೀಡುವುದು)

(ಇ) ಬರ ಪೀಡಿತ ತಾಲ್ಲೂಕುಗಳಿಗೆ ಸರ್ಕಾರ ಪರಿಹಾರ ಕ್ರಮಗಳಿಗಾಗಿ ಬಿಡುಗಡೆ ಮಾಡಲಾದ ಅನುದಾನವೆಷ್ಟು; ಕೈಗೊಳ್ಳಲಾಗಿರುವ ಪರಿಹಾರದ ಕ್ರಮಗಳೇನು? (ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ಮಾಹಿತಿ ನೀಡುವುದು)

## ಕೃಷಿ ಉತ್ಪಾದನೆ ಕುಂಠಿತವಾಗಿರುವ ಬಗ್ಗೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೭೧ (೯೦೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಬರ ಪರಿಸ್ಥಿತಿಯಿಂದಾಗಿ ಈ ವರ್ಷದ ಕೃಷಿ ಉತ್ಪಾದನೆಯು ಕಡಿಮೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಬೆಳೆ ಹಾನಿಯಾಗಿರುವ ಪ್ರಮಾಣ ಎಷ್ಟು; (ಜಿಲ್ಲಾವಾರು, ಬೆಳೆವಾರು ವಿವರ ನೀಡುವುದು)

(ಆ) ರೈತರ ಬೆಳೆಗಳಿಗೆ ನೀರಿನ ಅಭಾವದಿಂದಾಗಿ ಆಗಿರುವ ನಷ್ಟವನ್ನು ತುಂಬಿಕೊಡಲು ಎಕರೆಗೆ ಎಷ್ಟು ಪರಿಹಾರಧನವನ್ನು ನೀಡಲು ಸರ್ಕಾರ ಯೋಚಿಸಿದೆ; (ಬೆಳೆವಾರು ವಿವರ ನೀಡುವುದು)

(ಇ) ಮೈಸೂರು/ಮಂಡ್ಯ ಜಿಲ್ಲೆಗಳಲ್ಲಿ ಈ ಬಾರಿ ಎಷ್ಟು ಎಕರೆ ಜಮೀನನ್ನು ಪಾಳು ಬಿಡಲಾಗಿದೆ ಎಂದು ಅಂದಾಜಿಸಲಾಗಿದೆ?

## ಚಿಕ್ಕಹೊಳೆ ಜಲಾಶಯದಲ್ಲಿ ಅಕ್ರಮ ಮಣ್ಣು ಸಾಗಾಣಿಕೆ ಬಗ್ಗೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೭೨ (೯೦೧) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಾಮರಾಜನಗರ ಜಿಲ್ಲೆಯ ಚಿಕ್ಕಹೊಳೆ ಜಲಾಶಯ ಯಾವಾಗ ನಿರ್ಮಾಣವಾಯಿತು; ಇದರಲ್ಲಿ ಸಂಗ್ರಹವಾಗುವ ನೀರಿನ ಪ್ರಮಾಣ ಎಷ್ಟು; ಇದರ ಒಟ್ಟು ಅಚ್ಚುಕಟ್ಟು ಪ್ರದೇಶ ಎಷ್ಟು; ಈ ಜಲಾಶಯದಿಂದ ಯಾವ ಯಾವ ಕೆರೆಗಳಿಗೆ ನೀರನ್ನು ತುಂಬಿಸಲಾಗುತ್ತಿದೆ;

(ಆ) ಈ ಜಲಾಶಯದ ಮತ್ತು ಕಾಲುವೆಗಳ ನಿರ್ವಹಣೆಗೆ ಕಳೆದ ಮೂರು ವರ್ಷದಲ್ಲಿ ಮಾಡಿರುವ ವೆಚ್ಚ ಎಷ್ಟು; ಈ ನಿರ್ವಹಣಾ ಕಾರ್ಯ ಸಮರ್ಪಕವಾಗಿ ನಡೆಯದೇ ಇರುವುದು, ಕೆರೆಗಳಿಗೆ ಮತ್ತು ಕೊನೆಯ ಹಂತದ ಜಮೀನುಗಳಿಗೆ ನೀರು ಹರಿಯದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಈ ಜಲಾಶಯದ ಹಿನ್ನೀರಿನ ಪ್ರದೇಶದಿಂದ ತಮಿಳುನಾಡಿನವರು ಅನಧಿಕೃತವಾಗಿ, ಅವ್ಯಾಹತವಾಗಿ ನೂರಾರು ಟ್ರ್ಯಾಕ್ಟರ್‌ಗಳಲ್ಲಿ ಮಣ್ಣನ್ನು ಸಾಗಿಸಿಕೊಂಡು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇಂತಹ ಎಷ್ಟು ಪ್ರಕರಣಗಳೂ ವರದಿಯಾಗಿದೆ; ಇದನ್ನು ತಡೆಗಟ್ಟಲು ಕ್ರಮ ತೆಗೆದುಕೊಳ್ಳಲಾಗಿದೆಯೇ?

## ಬಂಡೀಪುರ, ಬಿಳಿಗಿರಿ ರಂಗನ ಬೆಟ್ಟ ಹಾಗೂ ಮಲೆಮಹದೇಶ್ವರ ಬೆಟ್ಟದ ಹುಲಿಗಳ ಸಂಖ್ಯೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೭೩ (೯೦೩) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಂಡೀಪುರ ರಾಷ್ಟ್ರೀಯ ಉದ್ಯಾನವನ, ಬಿ.ಆರ್.ಟಿ. ಹುಲಿ ರಕ್ಷಿತಾರಣ್ಯ, ಮಲೆಮಹದೇಶ್ವರ ಬೆಟ್ಟ, ಕಾವೇರಿ ವನ್ಯಜೀವಿಧಾಮಗಳಲ್ಲಿ ಇರುವ ಹುಲಿಗಳು ಮತ್ತು ಚಿರತೆಗಳ ಸಂಖ್ಯೆ ಬಗ್ಗೆ ಸಮೀಕ್ಷೆ ನಡೆಸಲಾಗಿದೆಯೇ; ಈ ಅರಣ್ಯಗಳಲ್ಲಿ ಕ್ರಮವಾಗಿ ಎಷ್ಟು ಹುಲಿ ಮತ್ತು ಚಿರತೆಗಳಿವೆ; ಈ ವರ್ಷ ಎಷ್ಟು ಹುಲಿ ಮತ್ತು ಚಿರತೆಗಳು ಬೇಟೆ ಮತ್ತು ಇತರ ಕಾರಣಗಳಿಂದ ಮೃತಪಟ್ಟಿವೆ; ಹುಲಿಗಳ ಸಂರಕ್ಷಣೆಗೆ ಕೈಗೊಂಡಿರುವ ಕ್ರಮಗಳೇನು;

(ಆ) ಈ ರಾಷ್ಟ್ರೀಯ ಉದ್ಯಾನ, ಅಭಯಾರಣ್ಯ, ವನ್ಯಜೀವಿಧಾಮಗಳ ಕಾಡಂಚಿನಲ್ಲಿ ಬರುವ ಗ್ರಾಮಗಳು, ಹಾಡಿಗಳು ಎಷ್ಟು; ಇಲ್ಲಿನ ಜನಸಂಖ್ಯೆ ಎಷ್ಟು; ಇವರು ಉರುವಲಿಗೆ ಕಾಡಿನ ಮೇಲೆ ಅವಲಂಬಿತರಾಗದಂತೆ, ಎಲ್.ಪಿ.ಜಿ. ಗ್ಯಾಸ್ ಸೌಲಭ್ಯ ಒದಗಿಸಲು ಕ್ರಮ ತೆಗೆದುಕೊಳ್ಳಲಾಗಿದೆಯೇ; ಇದುವರೆಗೆ ಎಷ್ಟು ಕುಟುಂಬಗಳಿಗೆ ಗ್ಯಾಸ್ ಸಂಪರ್ಕ ಕಲ್ಪಿಸಲಾಗಿದೆ;

(ಇ) ಈ ವಲಯಗಳಿಗೆ ಮಂಜೂರಾಗಿರುವ ಮತ್ತು ಹಾಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿ ಎಷ್ಟು; ಸಿಬ್ಬಂದಿ ಕೊರತೆ ಎಷ್ಟು; ಗುತ್ತಿಗೆ

ಆಧಾರದ ಮೇಲೆ ಕೆಲಸ ಮಾಡುತ್ತಿರುವವರ ಸಂಖ್ಯೆ ಎಷ್ಟು; ಸದರಿ ಹುದ್ದೆಗಳನ್ನು ಭರ್ತಿ ಮಾಡಿ ಅರಣ್ಯ ಮತ್ತು ವನ್ಯಜೀವಿಗಳ ಸಂರಕ್ಷಣೆಗೆ ಸೂಕ್ತ ಕ್ರಮ ಜರುಗಿಸಲಾಗುವುದೇ?

## ಮೇಟಿಕುಪ್ಪೆ ಅರಣ್ಯ ವಲಯದಲ್ಲಿ ಒತ್ತುವರಿ ಜಮೀನನ್ನು ತೆರವು ಬಗ್ಗೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೭೪ (೯೦೨) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೆಗ್ಗಡೆದೇವನಕೋಟೆ ತಾಲ್ಲೂಕಿನ ಮೇಟಿಕುಪ್ಪೆ ಅರಣ್ಯ ವಲಯದಲ್ಲಿ ಎಷ್ಟು ಎಕರೆ ಒತ್ತುವರಿ ಜಮೀನನ್ನು ಅರಣ್ಯ ಇಲಾಖೆ ತೆರವುಗೊಳಿಸಿದೆ; (ವಿವರ ಒದಗಿಸುವುದು) ಕೇವಲ ಅರ್ಧ ಎಕರೆ, ಒಂದು ಎಕರೆ ಒತ್ತುವರಿ ಮಾಡಿ ಬೇಸಾಯ ಮಾಡುತ್ತಿದ್ದ ಗಿರಿಜನ ರೈತರ ಒತ್ತುವರಿಯನ್ನು ತೆರವುಗೊಳಿಸಲಾಗಿದೆಯೇ; (ವಿವರ ಒದಗಿಸುವುದು)

(ಆ) ಒತ್ತುವರಿಯನ್ನು ತೆರವು ಮಾಡಿದ ನಂತರ ಈ ಭೂಮಿಯಲ್ಲಿ ಎಷ್ಟು ಮರಗಿಡಗಳನ್ನು ನೆಡಸಲಾಯಿತು; ಇದಕ್ಕೆ ಮಾಡಿದ ವೆಚ್ಚ ಎಷ್ಟು; ಹೊಸದಾಗಿ ನೆಟ್ಟ ಮರಗಿಡಗಳು ನಿರ್ವಹಣೆ ಇಲ್ಲದೆ ನೆಲಕಚ್ಚಿ ಒಣಗಿಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ಒದಗಿಸುವುದು)

(ಇ) ಅರ್ಧ ಎಕರೆ, ಒಂದು ಎಕರೆ ಒತ್ತುವರಿದಾರರಾಗಿದ್ದ ಗಿರಿಜನರನ್ನು ತೆರವು ಮಾಡಿಸಬಾರದೆಂಬ ಕಾನೂನು ಇದೆಯೇ; ಅಂತಹ ಗಿರಿಜನರಿಗೆ ಬೇಸಾಯ ಮಾಡಲು ಅವಕಾಶ ಕಲ್ಪಿಸಿಕೊಡಲಾಗುವುದೇ; ಉಳಿದಂತೆ ತೆರವು ಮಾಡಿದ ಭೂಮಿಯಲ್ಲಿ ಅರಣ್ಯೀಕರಣವನ್ನು ಸಮರ್ಪಕವಾಗಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದೇ?

## ಉತ್ತರ ಕರ್ನಾಟಕದ ಜೀವನಾಡಿಯಾಗಿರುವ ಮಹದಾಯಿ ಮತ್ತು ಮಲಪ್ರಭಾ ಜೋಡಣೆ ಬಗ್ಗೆ

**ಶ್ರೀ ವಿವೇಕ್‌ರಾವ್ ವಸಂತರಾವ್ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೭೫ (೯೬೧) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉತ್ತರ ಕರ್ನಾಟಕದ ಜೀವನಾಡಿಯಾಗಿರುವ ಮಹದಾಯಿ ಮತ್ತು ಮಲಪ್ರಭಾ ಜೋಡಣೆ (ಕಳಸಾ ಬಂಡೂರಿ ನಾಲಾ) ಬಗ್ಗೆ ಸರ್ಕಾರ ಕ್ರಮ ತೆಗೆದುಕೊಂಡಿರುವ ಮಾಹಿತಿ ನೀಡುವುದು;

(ಆ) ಉತ್ತರ ಕರ್ನಾಟಕದಲ್ಲಿ ಭೀಕರ ಬರಗಾಲ ಇರುವುದರಿಂದ, ಜಾನುವಾರುಗಳಿಗೆ ಹಾಗೂ ಕುಡಿಯುವ ನೀರಿಗಾಗಿ ಭೀಕರ ಬರಗಾಲ ಎದುರಿಸಬೇಕಾಗಿದ್ದು, ಈ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

## ಬೆಳಗಾವಿ ಜಿಲ್ಲೆಯಲ್ಲಿ ನೂತನ ಕಂದಾಯ ಗ್ರಾಮಗಳನ್ನು ಮಂಜೂರು ಮಾಡುವ ಕುರಿತು

**ಶ್ರೀ ವಿವೇಕ್‌ರಾವ್ ವಸಂತರಾವ್ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೭೬ (೯೬೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ಜಿಲ್ಲೆಯಲ್ಲಿ ನೂತನ ಕಂದಾಯ ಗ್ರಾಮಗಳನ್ನು ರಚಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ; ಇದ್ದಲ್ಲಿ, ತಾಲ್ಲೂಕುವಾರು ಗ್ರಾಮಗಳ ವಿವರ ನೀಡುವುದು;

(ಆ) ನೂತನ ಕಂದಾಯ ಗ್ರಾಮಗಳನ್ನು ರಚಿಸಲು ಸರ್ಕಾರಕ್ಕೆ ಅಗತ್ಯವಿರುವ ಅನುದಾನವೆಷ್ಟು?

## ಕಂದಾಯ ಇಲಾಖೆಯ ಅರೆನ್ಯಾಯಿಕ ಪ್ರಾಧಿಕಾರ ಪ್ರಕರಣಗಳ ಬಗ್ಗೆ

**ಶ್ರೀ ಸಿ.ಆರ್. ಮನೋಹರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೭೭ (೯೬೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಂದಾಯ ಇಲಾಖೆಯ ಅರೆನ್ಯಾಯಿಕ ಪ್ರಾಧಿಕಾರಗಳ ಮುಂದೆ ಬಾಕಿ ಇರುವ ಪ್ರಕರಣಗಳೆಷ್ಟು; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಚಿಕ್ಕಬಳ್ಳಾಪುರ, ಕೋಲಾರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಕಳೆದ ೫–೬ ವರ್ಷಗಳಿಂದ ವಿಲೇವಾರಿಯಾಗದೆ ಉಳಿದಿರುವ ಅರೆನ್ಯಾಯಿಕ ಪ್ರಾಧಿಕಾರದ ಪ್ರಕರಣಗಳೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಈ ಪ್ರಕರಣಗಳನ್ನು ತ್ವರಿತಗತಿಯಲ್ಲಿ ಇತ್ಯರ್ಥಪಡಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)

## ಕಲುಬುರಗಿ ಜಿಲ್ಲೆಯ ಬರ ಪರಿಹಾರಕ್ಕೆ ಸಂಬಂಧಿಸಿದಂತೆ

**ಶ್ರೀ ಇಕ್ಬಾಲ್ ಅಹ್ಮದ್ ಸರಡಗಿ (ನಾಮನಿರ್ದೇಶನ ಹೊಂದಿದವರು) –**

೮೭೮ (೧೦೫೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲುಬುರಗಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಬರ ಪರಿಹಾರಕ್ಕಾಗಿ ಎಷ್ಟು ಅನುದಾನ ಮಂಜೂರು ಮಾಡಲಾಗಿದೆ;

(ಆ) ಈ ಪೈಕಿ ಯಾವ ಯಾವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ; (ವಿವರ ಒದಗಿಸುವುದು)

(ಇ) ಈ ಪೈಕಿ ಖರ್ಚಾದ ಅನುದಾನ ಎಷ್ಟು ಮತ್ತು ಖರ್ಚಾಗದೆ ಉಳಿದಿರುವ ಅನುದಾನ ಎಷ್ಟು? (ವಿವರ ಒದಗಿಸುವುದು)

## ಕಲುಬುರಗಿ ಜಿಲ್ಲೆಯ ಚೆಕ್ ಡ್ಯಾಂಗಳಿಗೆ ಸಂಬಂಧಿಸಿದಂತೆ

**ಶ್ರೀ ಇಕ್ಬಾಲ್ ಅಹ್ಮದ್ ಸರಡಗಿ (ನಾಮನಿರ್ದೇಶನ ಹೊಂದಿದವರು) –**

೮೭೯ (೯೬೯) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲುಬುರಗಿ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಒಟ್ಟು ಚೆಕ್ ಡ್ಯಾಂಗಳ ಸಂಖ್ಯೆ ಎಷ್ಟು; (ವಿವರ ಒದಗಿಸುವುದು)

(ಆ) ಇವುಗಳ ಪೈಕಿ ಸುಸ್ಥಿತಿಯಲ್ಲಿರುವ ಮತ್ತು ದುಸ್ಥಿತಿಯಲ್ಲಿರುವ ಚೆಕ್ ಡ್ಯಾಂಗಳು ಯಾವುವು; (ತಾಲ್ಲೂಕುವಾರು ವಿವರ ಒದಗಿಸುವುದು)

(ಇ) ಕೆಲವು ಚೆಕ್ ಡ್ಯಾಂಗಳೂ ದುಸ್ಥಿತಿಯಲಿದ್ದರೆ ಅದಕ್ಕೆ ಕಾರಣಗಳೇನು; ಇವುಗಳನ್ನು ಸರಿಪಡಿಸಲು ಅನುಸರಿಸಿರುವ ಕ್ರಮಗಳನ್ನು ಹಾಗೂ ಸರಿಪಡಿಸಲು ಎಷ್ಟು ಸಮಯ ಬೇಕಾಗುತ್ತದೆ? (ವಿವರ ನೀಡುವುದು)

## ಕಲುಬುರಗಿ ಜಿಲ್ಲೆಯಲ್ಲಿನ ಹಸಿರು ಗ್ರಾಮ ಯೋಜನೆಗಳ ಬಗ್ಗೆ

**ಶ್ರೀ ಇಕ್ಬಾಲ್ ಅಹ್ಮದ್ ಸರಡಗಿ (ನಾಮನಿರ್ದೇಶನ ಹೊಂದಿದವರು) –**

೮೮೦ (೯೬೮) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲುಬುರಗಿ ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ತಾಲ್ಲೂಕಿಗೊಂದು ಹಸಿರು ಗ್ರಾಮ ಯೋಜನೆಯಡಿಯಲ್ಲಿ ಆಯ್ದೆಯಾಗಿರುವ ಗ್ರಾಮಗಳೆಷ್ಟು; (ತಾಲ್ಲೂಕುವಾರು ವಿವರ ಒದಗಿಸುವುದು)

(ಆ) ಇಂತಹ ಯೋಜನೆಯಡಿ ಗ್ರಾಮವನ್ನು ಆಯ್ಕೆ ಮಾಡುವಾಗ ಅನುಸರಿಸುವ ಮಾನದಂಡಗಳೇನು;

(ಇ) ಇಂತಹ ಯೋಜನೆಯಡಿ ಯಾವ ಯಾವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುವುದು?

## ಬೆಂಗಳೂರಿನ ಮ್ಯಾಗ್ರತ್ ರಸ್ತೆಯಲ್ಲಿರುವ ಪುಟ್‌ಬಾಲ್ ಕ್ರೀಡಾಂಗಣ ಕುರಿತು

**ಶ್ರೀ ಜಿ. ರಘು ಆಚಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೮೧ (೯೭೧) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರಿನ ವ್ಯಾಗ್ರತ್ ರಸ್ತೆಯಲ್ಲಿರುವ ಗರುಡ ಮಾಲ್ ಮುಂದಿರುವ ಪುಟ್‌ಬಾಲ್ ಕ್ರೀಡಾಂಗಣ ಖಾಸಗಿಯವರಿಗೆ ನೀಡಲಾಗುತ್ತಿದೆಯೇ;

(ಆ) ನೀಡುತ್ತಿದ್ದಲ್ಲಿ, ಯಾವ ಮಾನದಂಡದ ಮೇಲೆ ಖಾಸಗಿಯವರಿಗೆ ವಹಿಸಲಾಗುತ್ತಿದೆ; (ವಿವರ ನೀಡುವುದು)

(ಇ) ಈಗಾಗಲೇ ಖಾಸಗಿಯವರಿಗೆ ನೀಡಲಾಗಿದ್ದಲ್ಲಿ, ಈ ಸಂಬಂಧ ಟೆಂಡರ್‌ನಲ್ಲಿ ಭಾಗವಹಿಸಿದ್ದ ಕಂಪನಿಗಳು ಯಾವುವು? (ವಿವರ ನೀಡುವುದು)

## ಬರಪೀಡಿತ ತಾಲ್ಲೂಕುಗಳ ಪರಿಹಾರದ ಕುರಿತು

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೮೨ (೧೦೩೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಯಲ್ಲಿ ಎಷ್ಟು ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಣೆ ಮಾಡಲಾಗಿದೆ; ಅವು ಯಾವುವು; (ಆದೇಶ ಸಂಖ್ಯೆ ಹಾಗೂ ದಿನಾಂಕಗಳನ್ನು ನೀಡುವುದು)

(ಆ) ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳ ಎಷ್ಟು ರೈತರಿಗೆ ಬರ ಪರಿಹಾರ ಮೊತ್ತವನ್ನು ವಿತರಿಸಲಾಗಿದೆ; ಬಾಕಿ ಎಷ್ಟು; (ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು)

(ಇ) ರಾಜ್ಯದ ಬರ ಪರಿಹಾರ ಪಾಲಿನ ಹಣವನ್ನು ಪಾವತಿ ಮಾಡಲಾಗಿದೆಯೇ; ಇಲ್ಲವಾದಲ್ಲಿ ಕಾರಣವೇನು; ಇದರಿಂದ ರೈತರಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಬರ ಪರಿಹಾರ ಮೊತ್ತವನ್ನು ರೈತರ ಖಾತೆಗಳಿಗೆ ಶೀಘ್ರವಾಗಿ ಜಮೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)

## ಮತ್ಸ್ಯಾಶ್ರಯ ಯೋಜನೆಯಡಿ ಕುರಿತು

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೮೩ (೧೦೩೮) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೀನುಗಾರಿಕೆ ಇಲಾಖೆ ವತಿಯಿಂದ ಅನುಷ್ಠಾನಗೊಳ್ಳುತ್ತಿರುವ ಯೋಜನೆವಾರು ಕಾರ್ಯಕ್ರಮಗಳು ಯಾವುವು;

(ಆ) ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ಮತ್ಸ್ಯಾಶ್ರಯ ಯೋಜನೆಯಡಿ ಮೀನುಗಾರಿಕೆ ಇಲಾಖೆಯಿಂದ ಮೀನುಗಾರರ ಫಲಾನುಭವಿಗಳಿಗೆ ಕಳೆದ ೩ ವರ್ಷಗಳಲ್ಲಿ ಮಂಜೂರಾದ ಮನೆಗಳು ಎಷ್ಟು; (ಜಿಲ್ಲಾವಾರು, ವರ್ಷವಾರು ಫಲಾನುಭವಿಗಳ ಸಂಪೂರ್ಣ ವಿವರ ನೀಡುವುದು)

(ಇ) ಈ ೩ ಜಿಲ್ಲೆಗಳ ನದಿ ಮತ್ತು ಜಲಾಶಯಗಳಲ್ಲಿ ಮೀನುಗಾರರಿಗೆ ಮೀನು ಶಿಕಾರಿ ಮಾಡಲು ಕಳೆದ ೩ ವರ್ಷಗಳಲ್ಲಿ ನೀಡಿರುವ ಲೈಸೆನ್ಸ್‌ಗಳೆಷ್ಟು; (ಜಿಲ್ಲಾವಾರು, ವರ್ಷವಾರು, ಲೈಸೆನ್ಸ್‌ದಾರರವಾರು ಸಂಪೂರ್ಣ ವಿವರ ನೀಡುವುದು)

(ಈ) ಈ ೩ ಜಿಲ್ಲೆಗಳಲ್ಲಿ ಇರುವ ಮೀನುಮರಿ ಉತ್ಪಾದನಾ ಕೇಂದ್ರಗಳು ಎಷ್ಟು; ಹಾಗೂ ಸದರಿ ಮೀನು ಮರಿ ಉತ್ಪಾದನಾ ಕೇಂದ್ರಗಳಲ್ಲಿ ಕಳೆದ ವರ್ಷಗಳಲ್ಲಿ ಉತ್ಪಾದಿಸಲಾಗಿರುವ ಮೀನು ಮರಿಗಳ ಸಂಖ್ಯೆ ಎಷ್ಟು? (ವಿವರ ನೀಡುವುದು)

## ಯೋಜನೆಗಳ ಮತ್ತು ಅನುದಾನಗಳ ಕುರಿತು

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೮೪ (೧೦೩೯) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಅನುಷ್ಠಾನಗೊಳ್ಳುತ್ತಿರುವ ಯೋಜನೆವಾರು ಕಾರ್ಯಕ್ರಮಗಳು ಯಾವುವು;

(ಆ) ಕಳೆದ ಮೂರು ವರ್ಷಗಳಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳಿಗೆ ಬಿಡುಗಡೆಯಾದ ಅನುದಾನ ಎಷ್ಟು; ಇದರಲ್ಲಿ ಈವರೆಗೆ ಯಾವ ಯಾವ ಉದ್ದೇಶಗಳಿಗಾಗಿ ಎಷ್ಟು ಹಣ ಖರ್ಚಾಗಿದೆ; ಯಾವ ಉದ್ದೇಶಗಳಿಗಾಗಿ ; ಬಾಕಿ ಎಷ್ಟು? (ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು)

## ವಿವಿಧ ಯೋಜನೆಗಳ ಅನುದಾನದ ಕುರಿತು

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೮೫ (೧೦೪೧) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳಿಗೆ ಕಳೆದ ೩ ವರ್ಷಗಳಿಂದ ಸಣ್ಣ ನೀರಾವರಿ ಇಲಾಖೆಯಲ್ಲಿ ವಿವಿಧ ಯೋಜನೇತರ ಹಾಗೂ ಇನ್ನಿತರ ಲೆಕ್ಕ ಶೀರ್ಷಿಕೆಯಲ್ಲಿ ನಿರ್ವಹಣಾ ಮತ್ತು ದುರಸ್ಥಿ ವೆಚ್ಚಕ್ಕಾಗಿ ಬಿಡುಗಡೆಯಾದ ಒಟ್ಟು ಅನುದಾನ ಎಷ್ಟು; (ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು)

(ಆ) ಈ ೩ ಜಿಲ್ಲೆಗಳಲ್ಲಿ ಸದರಿ ಅನುದಾನದಲ್ಲಿ ಬಳಕೆ ಮಾಡಲಾದ ಹಾಗೂ ಬಾಕಿ ಉಳಿದ ಅನುದಾನ ಎಷ್ಟು; (ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು)

(ಇ) ಬಳಕೆ ಮಾಡಲಾದ ವಿವಿಧ ಅನುದಾನದಲ್ಲಿ ಕೈಗೊಂಡ ಕಾಮಗಾರಿಗಳು ಯಾವುವು; (ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು)

(ಈ) ೨೦೧೮–೧೯ನೇ ಸಾಲಿನ ವಿವಿಧ ಕ್ರಿಯಾ ಯೋಜನೆಯಲ್ಲಿ ಮಂಜೂರಾದ ಯೋಜನೇತರ ವೆಚ್ಚ ಎಷ್ಟು? (ತಾಲ್ಲೂಕುವಾರು, ಯೋಜನೆವಾರು ಮಾಹಿತಿ ನೀಡುವುದು)

## ಉದ್ಯೋಗ ಮೇಳ ಯೋಜನೆಯ ಕುರಿತು

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೮೮೬ (೧೦೪೦) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾರ್ಮಿಕ ಇಲಾಖೆ ವತಿಯಿಂದ ಅನುಷ್ಠಾನಗೊಳ್ಳುತ್ತಿರುವ ಯೋಜನೆವಾರು ಕಾರ್ಯಕ್ರಮಗಳು ಯಾವುವು;

(ಆ) ಕಾರ್ಮಿಕ ಇಲಾಖೆ ಆಯೋಜಿಸುವ ಉದ್ಯೋಗ ಮೇಳದ ಪರಿಕಲ್ಪನೆಗಳು ಏನು; ಕಳೆದ ಮೂರು ವರ್ಷಗಳಿಂದ ಈ ಮೇಳದ ಮೂಲಕ ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳ ಎಷ್ಟು ನಿರುದ್ಯೋಗಿಗಳಿಗೆ ಉದ್ಯೋಗ ದೊರಕಿದೆ;

(ಇ) ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳಲ್ಲಿನ ಉದ್ಯೋಗ ನೋಂದಣಿ ಕಛೇರಿಗಳ ಈಗಿನ ಸ್ಥಿತಿಗತಿಗಳೇನು; ನೋಂದಣಿ ಮಾಡಿರುವ ನಿರುದ್ಯೋಗಿಗಳಿಗೆ ನೀಡಿರುವ ಮಾಹಿತಿಗಳು ಏನು? (ವಿವರ ನೀಡುವುದು)

## ಕೊಡಗು ಜಿಲ್ಲೆಯಲ್ಲಿ ಮಾನವ ಮತ್ತು ಕಾಡಾನೆಗಳ ಸಂಘರ್ಷದಿಂದ ಪ್ರಾಣ ಹಾನಿ ಕುರಿತು

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು)–**

೮೮೭ (೧೦೪೫) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಡಗು ಜಿಲ್ಲೆಯಲ್ಲಿ ಮಾನವ ಮತ್ತು ಕಾಡಾನೆಗಳ ಸಂಘರ್ಷದಿಂದ ಪ್ರಾಣ ಹಾನಿ ಹಾಗೂ ದೈಹಿಕ ಅಂಗವಿಕಲತೆಗಳು ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಈ ರೀತಿಯ ಮಾನವ ಮತ್ತು ಕಾಡಾನೆಗಳ ಸಂಘರ್ಷವನ್ನು ಶಾಶ್ವತವಾಗಿ ತಪ್ಪಿಸುವ ಸಲುವಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

(ಇ) ಕಳೆದ ೫ ವರ್ಷಗಳಲ್ಲಿ ಕೊಡಗು ಜಿಲ್ಲೆಯಲ್ಲಿ ಈ ರೀತಿಯ ಕಾಡಾನೆ ದಾಳಿಗಳಿಂದ ಅಂಗವಿಕಲತೆ/ಪ್ರಾಣ ಹಾನಿಗೊಳಗಾದ ಪ್ರಕರಣಗಳಲ್ಲಿ ನೀಡಿರುವ ಪರಿಹಾರದ ಮೊತ್ತವೆಷ್ಟು? (ಪ್ರಕರಣವಾರು ಸಂಪೂರ್ಣ ವಿವರ ನೀಡುವುದು)

## ರಾಜ್ಯದಲ್ಲಿನ ನೆಡುತೋಪು ಬೆಳೆಸುವ ಕಾರ್ಯಕ್ರಮ ಕುರಿತು

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು)–**

೮೮೮ (೧೦೪೪) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಅರಣ್ಯ ಇಲಾಖೆಯಿಂದ ನೆಡುತೋಪುಗಳನ್ನು ಬೆಳೆಸುವ ಕಾರ್ಯಕ್ರಮ ಈಗಲೂ ಚಾಲ್ತಿಯಲ್ಲಿದೆಯೇ;

(ಆ) ಇದ್ದಲ್ಲಿ, ನೆಡುತೋಪು ನಿರ್ಮಾಣದಿಂದ ಜೀವ ವೈವಿಧ್ಯಕ್ಕೆ ಧಕ್ಕೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಬಂದಿದ್ದಲ್ಲಿ, ನೆಡುತೋಪು ನಿರ್ಮಾಣವನ್ನು ಸಂಪೂರ್ಣವಾಗಿ ನಿಲ್ಲಿಸಲಾಗಿದೆಯೇ; ನಿಲ್ಲಿಸಲಾಗಿದ್ದಲ್ಲಿ, ಈ ಕಾರ್ಯಕ್ರಮದ ಬದಲಾಗಿ ಯಾವ ಕಾರ್ಯಕ್ರಮವನ್ನು ರೂಪಿಸಲಾಗಿದೆ? (ವಿವರ ನೀಡುವುದು)

## ಕೊಡಗು ಜಿಲ್ಲೆಯಲ್ಲಿ ಕಾಡಾನೆಗಳ ಹಾವಳಿಯಿಂದ ರೈತರ ಬೆಳೆನಾಶ ಕುರಿತು

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು)–**

೮೮೯ (೧೦೪೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಡಗು ಜಿಲ್ಲೆಯಲ್ಲಿ ಕಾಡಾನೆಗಳ ಹಾವಳಿಯಿಂದ ರೈತರು ಬೆಳೆದ ಬೆಳೆಗಳು ನಾಶಕ್ಕೊಳಗಾಗಿ ಅವರು ಸಂಕಷ್ಟಕ್ಕೆ ಸಿಲುಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಕಾಡಾನೆಗಳ ಈ ರೀತಿಯ ಹಾವಳಿಯನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು)

(ಇ) ೨೦೧೫–೧೬ ಮತ್ತು ೨೦೧೬–೧೭ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಕಾಡಾನೆಗಳ ಹಾವಳಿಯಿಂದ ಆಗಿರುವ ಬೆಳೆ ನಾಶಕ್ಕೆ ನೀಡಿರುವ ಪರಿಹಾರದ ಸಂಪೂರ್ಣ ವಿವರ ನೀಡುವುದು?

# ಕೊಡಗು ಜಿಲ್ಲೆಯಲ್ಲಿ ಮುಜರಾಯಿ ವ್ಯಾಪ್ತಿಯ ದೇವಾಲಯಗಳ ಕುರಿತು

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು)–**

೮೯೦ (೧೦೪೨) ಮಾನ್ಯ ಜವಳಿ ಹಾಗೂ ಮುಜರಾಯಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಡಗು ಜಿಲ್ಲೆಯಲ್ಲಿ ಮುಜರಾಯಿ ವ್ಯಾಪ್ತಿಗೆ ಒಳಪಟ್ಟಿರುವ ದೇವಾಲಯಗಳ ಸಂಖ್ಯೆ ಎಷ್ಟು; (ಸಂಪೂರ್ಣ ವಿವರ ನೀಡುವುದು)

(ಆ) ಸದರಿ ದೇವಾಲಯಗಳಿಗೆ ಕಳೆದ ೫ ವರ್ಷಗಳಲ್ಲಿ ನೀಡಿರುವ ಅನುದಾನ ಎಷ್ಟು? (ಸಂಪೂರ್ಣ ವಿವರ ನೀಡುವುದು)

**ಶ್ರೀನಿವಾಸ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ಸುವರ್ಣಸೌಧ, ಬೆಳಗಾವಿ ಕಾ.ಸೂ.0–04, ಪ್ರತಿಗಳು 700